2019 ಕ.ತೀ.ವ 93

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಾನ್ ಮೈಕೆಲ್ ಕುನ್ಹಾ

ಕೊಗುಂಡಿ ದ್ಯಾಮಣ್ಣ –ವಿರುದ್ಧ– ಮಣಿಕಾಂತ ಸರ್ಕಾರ್ ಮತ್ತು ಇನ್ನೊಬ್ಬರು*

ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಮೇರೆಗಿನ ಕ್ರಿಮಿನಲ್ ಅರ್ಜಿ.

ಅರ್ಜಿದಾರರು, ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರು, ದಾವಣಗೆರೆ ಇವರು ಪಿಸಿಆರ್ ಸಂಖ್ಯೆ:91/2013ರಲ್ಲಿ ದಿನಾಂಕ 2.12.2013ರಂದು ಹೊರಡಿಸಿದ ಆದೇಶವನ್ನು ಮತ್ತು ದಿನಾಂಕ 2.12.2013ರಂದು ದಾಖಲಿಸಿದ ದೂರನ್ನು ಮತ್ತು ತತ್ಪರಿಣಾಮವಾಗಿ ಲೋಕಾಯುಕ್ತ ಪೊಲೀಸ್, ದಾವಣಗೆರೆ ಇವರು ದಿನಾಂಕ 10.12.2013ರಂದು ಕ್ರಿ.ಅರ್ಜಿ ಸಂಖ್ಯೆ:107/2013ರಲ್ಲಿ ದಾಖಲಿಸಿದ ಎಫ್ಐಆರ್ ಅನ್ನು ವಜಾಗೊಳಿಸುವಂತೆ ಕೋರಿ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿರುವರು.

ಪ್ರಸ್ತುತ ಮೊಕದ್ದಮೆಯ ಮಾನ್ಯ ಮ್ಯಾಜಿಸ್ಟ್ರೇಟರು ದೂರಿನಲ್ಲಿ ಮಾಡಲಾದ ಆರೋಪಗಳಿಗೆ ಅನ್ವಯವಾಗುವ ವಸ್ತುಸ್ಥಿತಿಯನ್ನು ಅಥವಾ ಮ್ಯಾಜಿಸ್ಟ್ರೇಟರು ದೂರಿನೊಂದಿಗೆ ಹಾಜರುಪಡಿಸಲಾದ ಯಾವುದೇ ದಸ್ತಾವೇಜನ್ನು ಗಮನಕ್ಕೆ ತಂದುಕೊಂಡಿರುವುದನ್ನು ದಾಖಲಿಸದೇ 156 (3)ನೇ ಪ್ರಕರಣದ ಅಡಿಯಲ್ಲಿ ಪೊಲೀಸ್ ಅಧೀಕ್ಷಕರು ಲೋಕಾಯುಕ್ತಕ್ಕೆ ದೂರನ್ನು ಉಲ್ಲೇಖಿಸಿ ಆದೇಶಿಸಿರುತ್ತಾರೆ. ಸರ್ಕಾರೇತರ ನೌಕರರಂತೆಯೇ ಸರ್ಕಾರಿ ನೌಕರರ ವಿರುದ್ಧ ದೂರನ್ನು ದಾಖಲಿಸಿರುವ ಸಂಗತಿಯಲ್ಲಿ ಇದು ಸ್ಪಷ್ಟವಾಗುತ್ತದೆ. ವಶಪಡಿಸಿಕೊಂಡ ಬಾರಿ ಸಂಖ್ಯೆಯ ಸ್ವತ್ತುಗಳಿಗೆ ಸಂಬಂಧಿಸಿದಂತೆ ಅದರಲ್ಲಿ ಮಾಡಲಾದ ಮುಖ್ಯ ಆಪಾದನೆಗಳೆಲ್ಲವು ಮತ್ತು ದೂರಿನಲ್ಲೂ ಸಹ ಅದೇ ಆಪಾದನೆಗಳನ್ನು ಮಾಡಲಾಗಿದೆ. ಅದರಲ್ಲೂ ದೂರಿನಲ್ಲಿ, 1ನೇ ಸಂಖ್ಯೆ ಆಪಾದಿತ

*ಕ್ರಿಮಿನಲ್ ಅರ್ಜಿ ಸಂಖ್ಯೆ: 8034/2013 ಇದರೊಂದಿಗೆ ಇತರೆ, ದಿನಾಂಕ 13ನೇ ಫೆಬ್ರವರಿ, 2017.

ಮತ್ತು 9ನೇ ಸಂಖ್ಯೆಯ ಆಪಾದಿತನು ಸ್ನೇಹಿತರಾಗಿರುವರು ಇವರು ಅಕ್ರಮವಾಗಿ ಹಲವು ಸ್ವತ್ತುಗಳನ್ನು ಖರೀದಿಸಿರುವರು ಮತ್ತು 1ನೇ ಸಂಖ್ಯೆ ಮತ್ತು 9ನೇ ಸಂಖ್ಯೆಯ ಆಪಾದಿತನು ಸರ್ಕಾರಿ ನೌಕರನಾಗಿದ್ದ ತನ್ನ ಪದವನ್ನು ದುರುಪಯೋಗಪಡಿಸಿಕೊಂಡು, ಕಪ್ಪು ಹಣದ ಬಲದಿಂದ 2 ರಿಂದ 8ನೇ ಸಂಖ್ಯೆಯ ಆಪಾದಿತರುಗಳ ಹೆಸರಿನಲ್ಲಿ ಈ ಎಲ್ಲ ನಿವೇಶನ ಮತ್ತು ಜಮೀನುಗಳನ್ನು ಖರೀದಿಸಿರುತ್ತಾರೆ ಎಂದು ದೂರಿನಲ್ಲಿ ಹೇಳಲಾಗಿದೆಯೇ ಹೊರತು ಆ ಸಂಬಂಧದಲ್ಲಿ ದೂರಿನಲ್ಲಿ ಖರೀದಿಸಿದ ಭೂಮಿಗಳ ಯಾವುದೇ ಒಂದು ಕ್ರಯಪತ್ರದ ಅಥವಾ ಉದ್ಧೃತ ಆರ್‌ಟಿಸಿಯ ದಸ್ತಾವೇಜುಗಳನ್ನು ದೂರಿನ ಅರ್ಜಿಯೊಂದಿಗೆ ಹಾಜರುಪಡಿಸಿರುವುದಿಲ್ಲ. ಈ ಎಲ್ಲ ಸ್ವತ್ತುಗಳು ಅರ್ಜಿದಾರರ ಹೆಸರಿನಲ್ಲಿದೆ ಎಂಬುದನ್ನು ಸ್ಪಷ್ಟ ಪಡಿಸುವಂತಹ ಯಾವುದೇ ದಸ್ತಾವೇಜುಗಳನ್ನು ಅರ್ಜಿಯೊಂದಿಗೆ ಲಗತ್ತಿಸಿಲ್ಲದಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

ಈ ಖಾಸಗಿ ದೂರಿನಲ್ಲಿ ನಿರ್ದಿಷ್ಟವಾಗಿ 1 ರಿಂದ 9ರ ಸಂಖ್ಯೆಯ ಆಪಾದಿತರು ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ 8 ಮತ್ತು 9ನೇ ಪ್ರಕರಣದ ಅಡಿಯಲ್ಲಿ ಮತ್ತು ಭಾರತ ದಂಡ ಸಂಹಿತೆಯ 34, 143, 504 ಮತ್ತು 506ನೇ ಪ್ರಕರಣದ ಅಡಿಯಲ್ಲೂ ಸಹ ದಂಡನೀಯ ಅಪರಾಧವನ್ನು ಎಸಗಿರುವರೆಂದು ನಿರೂಪಿಸಿ ಕ್ರಮ ತೆಗೆದುಕೊಳ್ಳಲು ನಿವೇದಿಸಿರುವರು. ದೂರಿನಲ್ಲಿ ಉಲ್ಲಂಘಿಸಿದ ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ 8 ಮತ್ತು 9ನೇ ಪ್ರಕರಣದಲ್ಲಿರುವ ಅಂಶಗಳಾವುವು ಈ ದೂರಿಗೆ ಅತ್ಯಲ್ಪವಾಗಿಯೂ ಅನ್ವಯವಾಗುವುದಿಲ್ಲ. ಮತ್ತೊಂದು ಕಡೆಯಲ್ಲಿ, ಈಗಾಗಲೇ ಮೇಲೆ ನಿರೂಪಿಸಿರುವಂತೆ, ಆಪಾದಿತ ವಿವಿಧ ಸ್ವತ್ತುಗಳ ಸ್ವಾಧೀನಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದ ಎಲ್ಲಾ ಆಪಾದನೆಗಳೂ ಕಪ್ಪು ಹಣದ ಬಲದಿಂದ ಅಕ್ರಮವಾಗಿ ಸ್ವಾಧೀನತೆ ಹೊಂದಿರುವ ಸ್ವತ್ತುಗಳಾಗಿವೆ ಎಂದಿದ್ದಾರೆ. ಈ ಆಪಾದನೆಗಳೆಲ್ಲವೂ ಸತ್ಯವೆಂದು ಕಂಡುಬಂದರೆ, ಈ ಆಪಾದನೆಗಳಿಗೆ ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ 13(1)(ಇ) ಪ್ರಕರಣದ ಅಡಿಯಲ್ಲಿ ಅನ್ವಯವಾಗುತ್ತವೆಯೇ ಹೊರತು ಈ ಆಪಾದನೆಗಳಿಗೆ ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ 8 ಮತ್ತು 9ನೇ ಪ್ರಕರಣಗಳು ಅನ್ವಯವಾಗುವುದಿಲ್ಲ. ನಿಸ್ಸಂಶಯವಾಗಿ, ದೂರುದಾರರು ದೂರಿನಲ್ಲಿ ಕಾನೂನಿನ ಉಪಬಂಧವನ್ನು ಉಲ್ಲೇಖಿಸುವ ಅಗತ್ಯವಿರುವುದಿಲ್ಲ ಮತ್ತು ತಪ್ಪಾದ ಕಾನೂನು ಉಪಬಂಧವನ್ನು ದೂರಿನಲ್ಲಿ ಉಲ್ಲೇಖಿಸಿರುವುದರಿಂದ ದೂರು ನ್ಯೂನತೆಯಿಂದ ಕೂಡಿದೆ. ಈ ರೀತಿಯ

ಉಲ್ಲೇಖಗಳ ಮೂಲಕ ದೂರನ್ನು ಸಲ್ಲಿಸಬಾರದಾಗಿತ್ತು. ಆದರೆ ಪ್ರಸ್ತುತ ಮೊಕದ್ದಮೆಯಲ್ಲಿ, ದೂರುದಾರನು ದೂರಿನಲ್ಲಿ ವಕೀಲರ ನೆರವನ್ನು ಪಡೆದುಕೊಂಡಿರುವುದನ್ನು ಪ್ರಕಟಪಡಿಸಿರುತ್ತಾನೆ ಮತ್ತು ಅವನ ವಕೀಲರಾದ ಶ್ರೀ ಡಿ.ವೈ. ಹಾದಿಮನಿ ಹೇಳಿರುವ ವ್ಯವಹರಣೆಗಳ ನೋಟೀಸಿನಲ್ಲಿ ಅದನ್ನು ನಿರ್ದಿಷ್ಟವಾಗಿ ನಿರೂಪಿಸಲಾಗಿದೆ. ನೋಟೀಸಿನಲ್ಲಿ ದೂರುದಾರನು ಕಾನೂನು ಸಲಹೆಯ ಅನುಕೂಲತೆಯನ್ನು ಪಡೆದುಕೊಂಡಿರುವುದು ಕಂಡುಬರುತ್ತದೆ. ಆದುದರಿಂದ, ದೂರಿನಲ್ಲಿ ತಪ್ಪಾದ ಉಪಬಂಧವನ್ನು ಉಲ್ಲೇಖಿಸಲಾಗಿದೆ ಎಂದು ಅನುಮಾನ ವ್ಯಕ್ತವಾಗಿದೆ ಇದು ನ್ಯಾಯಾಲಯವನ್ನು ತಪ್ಪುದಾರಿಗೆ ಮತ್ತು ತಪ್ಪಾದ ನಿರ್ದೇಶನಕ್ಕೆ ಎಳೆಯಲಾಗಿದೆ ಎಂದು ಪರ್ಯಾಲೋಚಿಸಬಹುದಾಗಿದೆ. ವಿಶೇಷ ನ್ಯಾಯಾಲಯ ಈ ದೂರನ್ನು ವಿವೇಚಿಸದೆ ಸುಮ್ಮನೆ ಕಣ್ಣುಮುಚ್ಚಿ ಸ್ವೀಕರಿಸಿದೆ ಮತ್ತು ದೂರಿನಲ್ಲಿ ಉಲ್ಲೇಖಿಸಿದ ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ 8 ಮತ್ತು 9ನೇ ಪ್ರಕರಣದ ಅಡಿಯಲ್ಲಿ ಅಂಥ ಯಾವುದೇ ಅಪರಾಧಗಳು ಪರಿಗಣಿಸಬೇಕೇ ಎಂಬುದನ್ನು ಸ್ವತಃ ತಾನೇ ಮನವರಿಕೆ ಮಾಡಿಕೊಳ್ಳದೆ, ಅದು ಮೊಕದ್ದಮೆಯನ್ನು ಲೋಕಾಯುಕ್ತ ಪೊಲೀಸರಿಗೆ ಉಲ್ಲೇಖಿಸುತ್ತದೆ, ಇಲ್ಲಿ ನ್ಯಾಯಾಲಯವು ಪರಿಸ್ಥಿತಿಯನ್ನು ತಪ್ಪಾಗಿ ಅರ್ಥೈಸಿಕೊಂಡಿರುವುದು ಸ್ಪಷ್ಟವಾಗಿದೆ.

ಎರಡನೇಯದಾಗಿ, ದೂರಿನಲ್ಲಿ 2013ರ ನವೆಂಬರ್ ಮೊದಲ ವಾರದಲ್ಲಿ ಮಾಡಿದ ಆಪಾದನೆಗಳಾಗಿವೆ. ದೂರುದಾರನ ಬಟ್ಟೆ ಅಂಗಡಿಯ ಹತ್ತಿರ ಬಂದ 1, 5 ಮತ್ತು 9ನೇ ಸಂಖ್ಯೆಯ ಆಪಾದಿತರು ದೂರುದಾರನನ್ನು ನಿಂದಿಸಿ, ಅವನಿಗೆ ಜೀವ ಬೆದರಿಕೆ ಹಾಕಿರುವುದನ್ನು ದೂರಿನಲ್ಲಿ ಆಪಾದಿಸಲಾಗಿದೆ. ಈ ಆಪಾದನೆಗಳು 1, 5 ಮತ್ತು 9ನೇ ಆರೋಪಿಗಳಿಗೆ ಮಾತ್ರ ಸಂಬಂಧಿಸಿದಾಗಿದೆ ಮತ್ತು ಈ ಆಪಾದನೆಗಳಾವುವು ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ ವ್ಯಾಪ್ತಿಯೊಳಗೆ ಬರುವುದಿಲ್ಲ ಮತ್ತು ಅದನ್ನು ಪ್ರತ್ಯರ್ಜಿದಾರ ಸಂಖ್ಯೆ 2 ಇವರು ತನಿಖೆ ಮಾಡಲು ಬರುವುದಿಲ್ಲ. ಆದರೆ ಆಶ್ಚರ್ಯಕರವಾಗಿ, ಪ್ರತ್ಯರ್ಜಿದಾರ ಸಂಖ್ಯೆ.2 ಅವರು ಈ ಎಲ್ಲಾ ಆಪಾದನೆಗಳ ವಿರುದ್ಧ 1 ರಿಂದ 9ನೇ ಸಂಖ್ಯೆಯ ಎಲ್ಲಾ ಆಪಾದಿತರ ಮೇಲೆ ಭಾರತ ದಂಡ ಸಂಹಿತೆಯ 34, 143, 504 ಮತ್ತು 506ನೇ ಪ್ರಕರಣದ ಅಡಿಯಲ್ಲಿ ಎಫ್‌ಐಆರ್ ಅನ್ನು ದಾಖಲಿಸಿರುತ್ತಾರೆ.

ಇದು ಹೇಗೆ ಇರಲಿ, ಪ್ರತ್ಯರ್ಜಿದಾರರು ಸಂಖ್ಯೆ.2 ಇವರು ದೂರಿನ ವಿವಾದಾಂಶವನ್ನು ಯುಕ್ತವಾಗಿ ಪರಿಶೀಲಿಸಿರುವುದಿಲ್ಲ ಅಥವಾ ದೂರಿನಲ್ಲಿ ಆಪಾದಿಸಲಾದ ಅಪರಾಧಗಳನ್ನು ಎಸಗಿರುವ ಬಗೆಯನ್ನು ಸ್ವತಃ ಮನವರಿಕೆ ಮಾಡಿಕೊಳ್ಳದೇ ಎಫ್‌ಐಆರ್ ಅನ್ನು ದಾಖಲಿಸಿರುವರು. ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ 8 ಮತ್ತು 9ನೇ ಪ್ರಕರಣದ ಅಡಿಯಲ್ಲಿ ಮತ್ತು ಭಾರತ ದಂಡ ಸಂಹಿತೆಯ 34 ಮತ್ತು 198ನೇ ಪ್ರಕರಣವನ್ನು ಓದಿಕೊಳ್ಳುವುದರೊಂದಿಗೆ ಎಫ್‌ಐಆರ್ ಅನ್ನು ನೋಂದಾಯಿಸಿರುವರು. ಆದರೆ ಸದರಿ ಉಪಬಂಧಗಳ ವ್ಯಾಪ್ತಿಗೆ ದೂರಿನಲ್ಲಿ ಮಾಡಲಾದ ಆಪಾದನೆಗಳು ಒಳಪಡುವುದಿಲ್ಲ. ಮತ್ತೊಂದು ಕಡೆಯಲ್ಲಿ, ದೂರಿನಲ್ಲಿ ಮಾಡಲಾದ ಆಪಾದನೆಗಳು ಅದರಲ್ಲಿ ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ 13(1)(ಇ) ಪ್ರಕರಣದ ವ್ಯಾಪ್ತಿಯೊಳಗೆ ಅಕ್ರಮ ಸಂಪತ್ತಿನ ಸಂಪಾದನೆಯ ಮತ್ತು ಅರ್ಜಿದಾರರ ಹೆಸರಿನಲ್ಲಿ ಸ್ವಾಧೀನ ಹೊಂದಿರುವ ಸ್ಥಿರಾಸ್ತಿಗಳು ಒಳಪಡುತ್ತವೆ. ವಿಷಾದನೀಯ ಅಂಶವೆಂದರೆ ಎಫ್‌ಐಆರ್ ಅನ್ನು ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮ 13(1)(ಇ) ಪ್ರಕರಣದ ಅಡಿಯಲ್ಲಿ ನೋಂದಾಯಿಸಿಲ್ಲದಿರುವುದು.

ಅರ್ಜಿದಾರರು ಹಾಜರು ಪಡಿಸಿದ ದಸ್ತಾವೇಜುಗಳನ್ನು ನಾನು ಸ್ವತಃ ಕೂಲಂಕುಷವಾಗಿ ಪರಾಮರ್ಶಿಸಿರುತ್ತೇನೆ. ಹಾಗೆ ಪರಾಮರ್ಶಿಸಿದ ದೂರಿನ ಪ್ರತಿಯಲ್ಲಿ 9ನೇ ಸಂಖ್ಯೆಯ ಆರೋಪಿಯ ವಿರುದ್ಧ ಆರೋಪಗಳನ್ನು ಮಾಡಿ ಅನಾಮಧೇಯ ದೂರನ್ನು ಲೋಕಾಯುಕ್ತ ಕಚೇರಿಯಲ್ಲಿ ಸ್ವೀಕರಿಸಲಾದ ದೂರಿನ ಪ್ರತಿಯೂ ಅದರಲ್ಲಿ ಒಂದಾಗಿದೆ, ಲೋಕಾಯುಕ್ತ ಕಚೇರಿಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಕಾರ್ಯ ನಿರ್ವಹಿಸುತ್ತಿರುವ ಕಾಲಾವಧಿಯಲ್ಲಿ ಅವರು ಪದೀಯ ಸ್ಥಾನವನ್ನು ದುರ್ಬಳಕೆ ಮಾಡಿಕೊಳ್ಳುವ ಮೂಲಕ ಕೋಟ್ಯಾಂತರ ರೂಪಾಯಿಗಳನ್ನು ಮತ್ತು ಭಾರೀ ಸ್ವತ್ತುಗಳನ್ನು ಸಂಪಾದಿಸಿರುವರು ಎಂಬ ದೂರು 9ನೇ ಆರೋಪಿಯ ವಿರುದ್ಧದ ಅನಾಮಧೇಯ ದೂರಾಗಿದೆ. ಈ ಅನಾಮಧೇಯ ದೂರಿನ ದಿನಾಂಕ 29.1.2009 ಸದರಿ ದೂರಿನಲ್ಲಿ 9ನೇ ಸಂಖ್ಯೆಯ ಆರೋಪಿಯ ಮೇಲೆ ನಿರ್ದಿಷ್ಟವಾಗಿ ಆರೋಪಿಯ ತಾಯಿ ಮತ್ತು ಇತರ ಸಂಬಂಧಿಕರ ಹೆಸರಿನಲ್ಲಿ ಭಾರೀ ಸ್ವತ್ತುಗಳನ್ನು ಸಂಪಾದಿಸಿರುವರು ಎಂಬುದು ಅದರಲ್ಲೂ ನಿರ್ದಿಷ್ಟವಾಗಿ ಆರೋಪಿಯ ತಾಯಿ ಮತ್ತು ಇತರ ಸಂಬಂಧಿಕರ ಹೆಸರಿನಲ್ಲಿ ಭಾರೀ ಸ್ವತ್ತುಗಳನ್ನು ಸಂಪಾದಿಸಿರುವರು ಎಂಬುದು ಅವರ ನಿರ್ದಿಷ್ಟವಾದ ಆರೋಪವಾಗಿದೆ. ಈ

ಮೊಕದ್ದಮೆಯಲ್ಲಿ 1ನೇ ಸಂಖ್ಯೆ ಪ್ರತ್ಯರ್ಜಿದಾರರು ಹೂಡಿದ ಖಾಸಗೀ ದೂರಿನಲ್ಲಿ ಉಲ್ಲೇಖಿಸಿದ 16 ಸರ್ವೇ ಸಂಖ್ಯೆ ವಿವಿಧ ಸ್ಥಳಗಳಲ್ಲಿ ಇರುವ ನಿವೇಶನ ಭೂಮಿಗಳನ್ನು ಬಹುತೇಕ ಗುರುತಿಸಲಾಗಿದೆ. ಶಿವಮೊಗ್ಗದ ಉಪ ಪೋಲೀಸ್ ಅಧೀಕ್ಷಕರು ಸದರಿ ಆರೋಪಗಳನ್ನು ವಿಚಾರಣೆ ಮಾಡಿ ದಿನಾಂಕ 29.1.2009ರಂದು ವಿವರವಾದ ವರದಿಯನ್ನು ಸಲ್ಲಿಸಿರುತ್ತಾರೆ. ವರದಿಯಲ್ಲಿ ಸದರಿ 16 ಸರ್ವೇ ನಂಬರ್‌ಗಳ ಆರ್.ಟಿ.ಸಿ ಗಳನ್ನು ಬಹಳ ಜಾಗರೂಕತೆಯಿಂದ ಪರಿಶೀಲಿಸಿರುತ್ತಾರೆ ಮತ್ತು ಸದರಿ ಸ್ವತ್ತುಗಳಿಗೆ ಸಂಬಂಧಿಸಿದ ಪೂರ್ವಾಧಿಗಳನ್ನು ಪರಿಶೀಲಿಸಿದಾಗ, ಅನಾಮಧೇಯ ದೂರಿನಲ್ಲಿ ನಮೂದಿಸಲಾದ ಸ್ವತ್ತುಗಳು 9ನೇ ಸಂಖ್ಯೆ ಆರೋಪಿಗಾಗಲೀ ಅಥವಾ ಅವರ ಕುಟುಂಬ ಸದಸ್ಯರು ಅಥವಾ ಸಂಬಂಧಿಕರುಗಳಿಗಾಗಲೀ ಸೇರಿದ್ದಲ್ಲ ಎಂಬುದು ವಿಚಾರಣಾ ವರದಿಯಲ್ಲಿ ನಿರೂಪಿಸಿರುತ್ತಾರೆ. ಈ ವರದಿಯಲ್ಲಿ, ತನಿಖಾಧಿಕಾರಿಯೂ ಎಂದರೆ ಉಪ ಪೋಲೀಸ್ ಅಧೀಕ್ಷಕರು 9ನೇ ಸಂಖ್ಯೆ ಆರೋಪಿಯ ವಿರುದ್ಧ ಮಾಡಲಾದ ಆರೋಪಗಳು ಅದರಲ್ಲೂ ಅಗ್ನಿ ದಿನಪತ್ರಿಕೆಯಲ್ಲಿ ಮಾಡಲಾದ ಆರೋಪಗಳು ದೋಷಪೂರಿತವಾಗಿದೆ. ಅಸಮಂಜಸವಾಗಿದೆ ಎಂದು ಸ್ಪಷ್ಟ ಪಡಿಸಿರುವರು.

ನಂತರದಲ್ಲಿ, 9ನೇ ಸಂಖ್ಯೆಯ ಆರೋಪಿಯ ವಿರುದ್ಧ ವಿಜಯ್ ಆರ್ ಎಂಬುವರು ಮತ್ತೊಂದು ಲಿಖಿತ ದೂರನ್ನು ನೀಡಿರುವರು. ಬೈಲಹೊಂಗಲದ ಉಪ–ಪೋಲೀಸ್ ಅಧೀಕ್ಷಕರು ಆ ದೂರನ್ನು ಯುಕ್ತವಾಗಿ ವಿಚಾರಣೆ ಮಾಡಿ ದಿನಾಂಕ 12.7.2013ರಂದು ವರದಿಯನ್ನು ನೀಡಿರುತ್ತಾರೆ. ವರದಿಯಲ್ಲಿ 9ನೇ ಸಂಖ್ಯೆಯ ಆರೋಪಿಯ ವಿರುದ್ಧ ಮಾಡಲಾದ ಆರೋಪಗಳೆಲ್ಲವು ಸುಳ್ಳೆಂದು ಮತ್ತು 9ನೇ ಸಂಖ್ಯೆಯ ಆರೋಪಿಯ ಸ್ವಾಧೀನದಲ್ಲಿರುವ ಸ್ವತ್ತುಗಳೆಲ್ಲವು ಅವನ ಆದಾಯದಿಂದಲೇ ಸಂಪಾದಿಸಿರುವುದು ಕಂಡು ಬರುತ್ತದೆ. ದೂರಿನಲ್ಲಿ ಹೇಳಲಾದ ಆರೋಪಗಳೆಲ್ಲವು ಸುಳ್ಳೆಂದು ವರದಿ ಮಾಡಿರುತ್ತಾರೆ. ದಿನಾಂಕ 12.7.2013ರಂದು ಸಲ್ಲಿಸಲಾದ ವರದಿಯಲ್ಲಿ ಈ ಸ್ವತ್ತುಗಳ ವಿಷಯಕ್ಕೊಳಪಟ್ಟಂತೆ ಸ್ವತ್ತುಗಳ ಹಾಲಿ ಪಿ.ಸಿ.ಆರ್ ಅನ್ನು ಸದರಿ ವಿಚಾರಣೆಗೆ ಒಳಪಡಿಸಿ ಆ ಸ್ವತ್ತುಗಳ ಸ್ಪಷ್ಟತೆಯನ್ನು ಬಹಿರಂಗಗೊಳಿಸಿದೆ ಮತ್ತು ಈ ವರದಿಯಲ್ಲಿ, ದೂರಿನಲ್ಲಿ ಆರೋಪಿಸಿದ ಸ್ವತ್ತುಗಳ 1ನೇ ಸಂಖ್ಯೆಯ ಆರೋಪಿಯ ತಾಯಿಯ ಹೆಸರಿನಲ್ಲಿರುವುದು ಕಂಡು ಬರುತ್ತದೆ ಹಾಗೂ ಈ ಸ್ವತ್ತುಗಳು ಅವರಿಗೆ ಪಿತ್ರಾರ್ಜಿತವಾಗಿ ಬಂದ ಸ್ವತ್ತಗಳಾಗಿವೆ ಮತ್ತು ಇತರ ಸ್ವತ್ತುಗಳು ಕವಿತ ಎಂಬ ಹೆಸರಿನಲ್ಲಿದ್ದು, ಅವರು ಸಿವಿಲ್ ನ್ಯಾಯಾಲಯ

ಮೂ.ದಾ.ಸಂಖ್ಯೆ 178/2008ರ ಡಿಕ್ರಿಯ ಮೂಲಕ ಕವಿತಾ ಅವರಿಗೆ ಬಂದ ಪಾಲಾಗಿದೆ ಮತ್ತು ಅವರ ಹೆಸರಿನಲ್ಲಿರುವ ಹರಪನಹಳ್ಳಿಯಲ್ಲಿರುವ ನಿವೇಶನವನ್ನು 1,63,000/- ರೂ.ಗಳನ್ನು ಸಂದಾಯ ಮಾಡಿ ತನ್ನ ತಂದೆಯಿಂದ ಅವರು ಖರೀದಿಸಿರುತ್ತಾರೆ ಎಂದು ವರದಿಯಲ್ಲಿ ವಿವರವಾಗಿ ನಮೂದಿಸಲಾಗಿದೆ.

ಹಾಗಾಗಿ, ಅರ್ಜಿದಾರರು ಹಾಜರು ಪಡಿಸಿದ ವಸ್ತು ವಿಷಯಗಳು ಮೇಲ್ನೋಟಕ್ಕೆ ಸರಿಯೆಂದು ಕಂಡು ಬಂದ ಕಾರಣದಿಂದ 1ನೇ ಸಂಖ್ಯೆ ಪ್ರತ್ಯರ್ಜಿದಾರರ ಪರವಾಗಿ ಸಾಧ್ಯವಾದಷ್ಟು ಬೇಗನೇ ಎಫ್‌ಐಆರ್‌ನ್ನು ದಾಖಲಿಸಿಕೊಳ್ಳಲಾಗಿದೆ. ಅತೀ ಸಣ್ಣ ಆರೋಪದ ಮೇಲೆ 1ನೇ ಸಂಖ್ಯೆಯ ಆಪಾದಿತನ ಮೇಲೆ ವಿಚಾರಣೆಯನ್ನು ನಡೆಸಲಾಗಿದೆ ಮತ್ತು ಸರ್ಕಾರಿ ನೌಕರನಾಗಿರುವ 9ನೇ ಸಂಖ್ಯೆ ಆಪಾದಿತನು ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ 13ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಈ ಯಾವುದೇ ಅಪರಾಧ ದುರ್ವ್ಯವಹಾರದ ಕೃತ್ಯಗಳು ಒಳಗೊಳ್ಳುವುದಿಲ್ಲ ಎಂಬುದು ವಿಚಾರಣೆಯಿಂದ ತಿಳಿದು ಬರುತ್ತದೆ.

ಪ್ರತ್ಯರ್ಜಿದಾರನು ತನ್ನ ಆಕ್ಷೇಪಣಾ ಹೇಳಿಕೆಯಲ್ಲಿ 9ನೇ ಸಂಖ್ಯೆಯ ಆಪಾದಿತನು ಈ ಮುಂಚೆ ಲೋಕಾಯುಕ್ತ ಕಚೇರಿಯಿಂದ ಪೋಲೀಸು ಇನ್‌ಸ್ಪೆಕ್ಟರ್ ಆಗಿ ಕೆಲಸ ನಿರ್ವಹಿಸುತ್ತಿದ್ದ ವ್ಯಕ್ತಿಯಾಗಿದ್ದು, ಈ ಕಾರಣದಿಂದ ತನ್ನ ಪ್ರಭಾವನ್ನು ಬಳಸಿ ಈ ಆಪಾದನೆಗಳಿಂದ ಅವನು ತಪ್ಪಿಸಿಕೊಂಡಿರುವ ಸಾಧ್ಯತೆಯ ಅಂಶವನ್ನು ಒತ್ತಿ ಹೇಳಿರುತ್ತಾನೆ. ಸದರಿ ವಾದಾಂಶವು ಹಾಗೆ ಆಗಿರಲು ಸಾಧ್ಯವಿಲ್ಲ ಎಂಬುದು ಅರ್ಜಿದಾರನು ಹಾಜರುಪಡಿಸಿದ ತನಿಖಾ ವರದಿಗಳನ್ನು ತಿರಸ್ಕರಿಸಲು ಸಾಧ್ಯವಿಲ್ಲ. ಈ ತನಿಖಾ ವರದಿಗಳಲ್ಲಿ ತನಿಖಾಧಿಕಾರಿಯು ನಡೆಸಿದ ತನಿಖಾ ವ್ಯವಹರಣೆಗಳ ಉಲ್ಲೇಖಗಳಲ್ಲಿ ತನಿಖಾಧಿಕಾರಿಯೂ ನಿರ್ದಿಷ್ಟವಾಗಿ ತನಿಖಾ ಪದ್ಧತಿ ಆರ್‌ಟಿಸಿಗಳ ಸತ್ಯಾಪನೆ, ಕಂದಾಯ ದಾಖಲೆಗಳನ್ನು, ಸಂಬಂಧಿಸಿದ ಶುದ್ಧ ಕ್ರಯ ಪತ್ರಗಳನ್ನು, ಪೂರ್ವಾಧಿಗಳನ್ನು ಮತ್ತು ಸಾಕ್ಷ್ಯಿದಾರರ ಹೇಳಿಕೆಗಳನ್ನು ಈ ವರದಿಯಲ್ಲಿ ನಿರೂಪಿಸಿರುತ್ತಾರೆ. ತನಿಖಾ ವರದಿಯಲ್ಲಿ ಸ್ವತ್ತಿನ ಪ್ರತಿಯೊಂದು ಬಾಬಿನ ಮೇಲೆ ಮಾಡಿದ ಚರ್ಚೆಯ ಅಂಶವನ್ನು ಒಳಗೊಂಡಿದೆ. ಖಾಸಗೀ ದೂರಿನ ಹಿನ್ನೆಲೆಯಲ್ಲಿ ಯಾವುದೇ ಸ್ವತ್ತಿನ ನೋಂದಾಯಿತ ಪತ್ರಗಳು ಅಥವಾ ಕಂದಾಯ ದಾಖಲೆಗಳ ಉಲ್ಲೇಖಗಳನ್ನು ಹೊರತುಪಡಿಸಿದ ಹಲವು ಆರೋಪಗಳು

ಮಾಡಿ ದೂರನ್ನು ಹೂಡಲಾಗಿದೆ. ಸದರಿ ಸನ್ನಿವೇಶಗಳ ಅಡಿಯಲ್ಲಿ ಮಾನ್ಯ ವಿಶೇಷ ನ್ಯಾಯಾಧೀಶರು ಅಪರಾಧ ದಂಡ ಪ್ರಕ್ರಿಯಾ ಸಂಹಿತೆಯ 156(3)ನೇ ಪ್ರಕರಣದ ಅಡಿಯಲ್ಲಿ ಎಫ್ಐಆರ್ ಅನ್ನು ದಾಖಲಿಸಿದ ಪರಿಣಾಮವಾಗಿ ಮತ್ತು ಸಂಪೂರ್ಣ ಅಕ್ರಮವಾದ ಮತ್ತು ಸಮರ್ಥಿತವಾಗಿರದ ಮೇಲೆ ತನಿಖೆ ನಡೆಸಲು ನಿರ್ದೇಶಿಸಿರುತ್ತಾರೆ. ಮಾನ್ಯ ಮ್ಯಾಜಿಸ್ಟ್ರೇಟರು ಅಪರಾಧ ದಂಡ ಪ್ರಕ್ರಿಯಾ ಸಂಹಿತೆಯ 156(3)ನೇ ಪ್ರಕರಣದ ಅಡಿಯಲ್ಲಿ ತನಿಖೆಯನ್ನು ನಡೆಸಲು ನಿರ್ದೇಶಿಸುವ ಮುಂಚೆ ಎಫ್ಐಆರ್‌ನಲ್ಲಿ ಒಳಗೊಂಡಿರುವ ವಿವಿಧ ಆಪಾದನೆಗಳ ಸಂಬಂಧದಲ್ಲಿ ಸಮರ್ಥವಾದ ಗಮನವನ್ನು ನೀಡುವುದಕ್ಕೆ ವಿಫಲರಾಗಿರುವರು. ಎರಡನೇ ಪ್ರತ್ಯರ್ಜಿದಾರರು ಸಹ ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ 8 ಮತ್ತು 9ನೇ ಪ್ರಕರಣದ ಅಡಿಯಲ್ಲಿ ದೂರಿನಲ್ಲಿ ಹೇಳಲಾದ ಯಾವುವೇ ಅಪರಾಧ ಒಳಗೊಳ್ಳುತ್ತದೆ ಎಂಬುದೇ ಸಮರ್ಥವಾದ ಅಂಶವನ್ನು ನೀಡಲು ವಿಫಲರಾಗಿರುವರು. ಎರಡನೇ ಪ್ರತ್ಯರ್ಜಿದಾರರು ಭಾರತ ದಂಡ ಸಂಹಿತೆಯ 34, 143, 504, 506 ಮತ್ತು 198ನೇ ಪ್ರಕರಣದ ಅಡಿಯಲ್ಲಿನ ಅಪರಾಧಕ್ಕಾಗಿ ಮೊಕದ್ದಮೆಯನ್ನು ದಾಖಲಿಸುವುದಕ್ಕೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದಿಲ್ಲ. ಎರಡನೇ ಪ್ರತ್ಯರ್ಜಿದಾರರು ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ 13(1)(ಇ) ಪ್ರಕರಣದ ಅಡಿಯಲ್ಲಿ ಅದನ್ನು ಅನ್ವಯಿಸುವ ಮುಂಚೆ ಆಪಾದಿತ ಸ್ವಾಧೀನ ಸ್ವತ್ತುಗಳ ಆರೋಪಗಳೊಳಗೆ ಯಾವುದೇ ಪ್ರಾರಂಭಿಕ ತನಿಖೆಯನ್ನು ನಡೆಸುವುದಕ್ಕೆ ವಿಫಲರಾಗಿರುವರು. ಪ್ರತ್ಯರ್ಜಿದಾರರು ಹೂಡಿರುವ ಇಡೀ ಅಪರಾಧ ವ್ಯವಹರಣೆಗಳು ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ ಉಪಬಂಧಗಳಿಗೆ ಪ್ರತಿಕೂಲವಾಗಿದೆ ಅದರಂತೆಯೇ, ಮೇಲೆ ಉಲ್ಲೇಖಿಸಿದ ನಿರ್ಣಯಗಳಲ್ಲಿ ಮಂಡಿತವಾದ ಇತ್ಯರ್ಥ ತತ್ವಗಳಿಗೂ ಇದು ಪ್ರತಿಕೂಲವಾಗಿದೆ. ಸದರಿ ಸನ್ನಿವೇಶಗಳ ಅಡಿಯಲ್ಲಿ, ಮೇಲಿನ ನಿರಂತರ ವ್ಯವಹರಣೆಗಳು ಅರ್ಜಿದಾರರನ್ನು ಅನವಶ್ಯಕ ಕಿರುಕುಳಕ್ಕೆ ಈಡು ಮಾಡಿರುವುದು ಅಲ್ಲದೆ ಅವರ ಕಾನೂನು ಹಕ್ಕುಗಳನ್ನು ಅತಿಲ್ಲಂಘಿಸಿದೆ ಅಲ್ಲದೆ, ಅದು ನ್ಯಾಯಾಲಯದ ವ್ಯವಹರಣೆಯನ್ನು ದುರುಪಯೋಗಪಡಿಸಿಕೊಂಡಿದೆ. ಈ ಎಲ್ಲ ಕಾರಣಗಳಿಂದ ನಾನು ಈ ಪ್ರಶ್ನಿತ ವ್ಯವಹರಣೆಗಳು ಮುಂದುವರೆಯಲು ಪುರಸ್ಕರಿಸುವುದಿಲ್ಲ.

**ತದನುಸಾರವಾಗಿ, ಅಪರಾಧ ಅರ್ಜಿಯನ್ನು ಪುರಸ್ಕರಿಸಲಾಗಿದೆ. ದಿನಾಂಕ 2.12.2013ರ ದೂರನ್ನು ಮತ್ತು ಇದರ ಪರಿಣಾಮ ನೋಂದಾಯಿತವಾದ ಎಫ್‌ಐಆರ್ ಅರ್ಜಿ ಸಂಖ್ಯೆ 107/2013ನ್ನು ಮತ್ತು ಮುಂದುವರೆದ ವಿಚಾರಣೆಯನ್ನು ಈ ಮೂಲಕ ವಜಾ ಮಾಡಿದೆ.**

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

*1. (2015) 6 ಎಸ್‌ಸಿಸಿ 287*
*ಪ್ರಿಯಾಂಕ ಶ್ರೀವಾಸ್ತವ ಮತ್ತು ಮತ್ತೊಬ್ಬರು –ವಿರುದ್ಧ–*
*ಉತ್ತರ ಪ್ರದೇಶ ರಾಜ್ಯ ಮತ್ತು ಇತರರು (ಉಲ್ಲೇ) 7*
*2. (2013) 10 ಎಸ್‌ಸಿಸಿ 705*
*ಅನಿಲ್ ಕುಮಾರ್ –ವಿರುದ್ಧ– ಎಂ.ಕೆ. ಅಯ್ಯಪ್ಪ (ಉಲ್ಲೇ) 10*
*3. ಎಐಆರ್ 1999 ಎಸ್‌ಸಿ 1765*
*ಎಂ.ಕೃಷ್ಣ –ವಿರುದ್ಧ– ಕರ್ನಾಟಕ ರಾಜ್ಯ (ಉಲ್ಲೇ) 12*
*4. ಎಐಆರ್ 2014 ಎಸ್‌ಸಿ 2567*
*ರಿಷಿಪಾಲ್ ಸಿಂಗ್ –ವಿರುದ್ಧ– ಉತ್ತರ ಪ್ರದೇಶ ರಾಜ್ಯ*
*ಮತ್ತು ಮತ್ತೊಬ್ಬರು (ಉಲ್ಲೇ) 12*
*5. ಮಾನೀಶ್ ಇ. –ವಿರುದ್ಧ–*
*ಕೇರಳ ರಾಜ್ಯ ಮತ್ತು ಇತರರು (ಉಲ್ಲೇ) 12*
*6. (2014) 2 ಎಸ್‌ಸಿಸಿ 1*
*ಲಲಿತ ಕುಮಾರಿ –ವಿರುದ್ಧ– ಉತ್ತರ ಪ್ರದೇಶ ರಾಜ್ಯ*
*6. 1992 ಸರಬರಾಜು (1)ಎಸ್‌ಸಿಸಿ 335*
*ಹರಿಯಾಣ ರಾಜ್ಯ ಮತ್ತು ಇತರರು –ವಿರುದ್ಧ–*
*ಬಜನಲಾಲ್ ಮತ್ತು ಇತರರು (ಉಲ್ಲೇ) 24*
*7. (2014) 2 ಎಸ್‌ಸಿಸಿ 1*
*ಲಲಿತ ಕುಮಾರಿ –ವಿರುದ್ಧ– ಉತ್ತರ ಪ್ರದೇಶ ರಾಜ್ಯ (ಉಲ್ಲೇ) 23*
*8. ಎಐಆರ್ 1971 ಎಸ್‌ಸಿ 520*
*ಪಿ. ಸಿರಾಜುದ್ದೀನ್ –ವಿರುದ್ಧ–*
*ಮದ್ರಾಸ್ ರಾಜ್ಯ (ಉಲ್ಲೇ) 25*

*9. (2013) 3 ಎಸ್‌ಸಿಸಿ 330*
*ರಾಜೀವ್ ಥಾಪರ್ ಮತ್ತು ಇತರರು –ವಿರುದ್ಧ–*
*ಮದನ್‌ಲಾಲ್ ಕಪೂರ್ (ಉಲ್ಲೇ) 29*

ಅರ್ಜಿದಾರರ ಪರ: ಶ್ರೀ ಸಿ.ಎಚ್. ಜಾದವ್ – ಹಿರಿಯ ವಕೀಲರು ಇವರೊಂದಿಗೆ ಶ್ರೀ ಎಸ್.ಜಿ. ರಾಘವೇಂದ್ರ ರೆಡ್ಡಿ, ವಕೀಲರು.
1ನೇ ಪ್ರತ್ಯರ್ಜಿದಾರರ ಪರ: ಶ್ರೀ ಪಿ.ವೈ. ಹಾದಿಮನಿ ಮತ್ತು ಶ್ರೀ ಶ್ರೀಧರ್ ಎನ್ ಹೆಗಡೆ, ವಕೀಲರು.
2ನೇ ಪ್ರತ್ಯರ್ಜಿದಾರರ ಪರ : ಶ್ರೀ ವೆಂಕಟೇಶ್, ಎಸ್. ಅರಭಟ್ಟಿ, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಜಾನ್ ಮೈಕೆಲ್ ಕುನ್ಹಾ:**

ಅರ್ಜಿದಾರರು, ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರು, ದಾವಣಗೆರೆ ಇವರು ಪಿಸಿಆರ್ ಸಂಖ್ಯೆ:91/2013ರಲ್ಲಿ ದಿನಾಂಕ 2.12.2013ರಂದು ಹೊರಡಿಸಿದ ಆದೇಶವನ್ನು ಮತ್ತು ದಿನಾಂಕ 2.12.2013ರಂದು ದಾಖಲಿಸಿದ ದೂರನ್ನು ಮತ್ತು ತತ್ಪರಿಣಾಮವಾಗಿ ಲೋಕಾಯುಕ್ತ ಪೊಲೀಸ್, ದಾವಣಗೆರೆ ಇವರು ದಿನಾಂಕ 10.12.2013ರಂದು ಕ್ರಿ.ಅರ್ಜಿ ಸಂಖ್ಯೆ:107/2013ರಲ್ಲಿ ದಾಖಲಿಸಿದ ಎಫ್‌ಐಆರ್ ಅನ್ನು ವಜಾಗೊಳಿಸುವಂತೆ ಕೋರಿ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿರುವರು.

2. ಪ್ರತ್ಯರ್ಜಿದಾರ ಸಂಖ್ಯೆ.1 ವ್ಯಾಪಾರಿ ಮತ್ತು ಸಮಾಜ ಕಾರ್ಯಕರ್ತ ಮತ್ತು ದಾವಣಗೆರೆ ಜಿಲ್ಲಾ ಶ್ರೀರಾಮ ಸೇವಾ ಘಟಕದ ಅಧ್ಯಕ್ಷರು ಆಗಿರುವರು ಇವರು ದಾವಣಗೆರೆಯ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಮುಂದೆ ದಂಡ ಪ್ರಕ್ರಿಯಾ ಸಂಹಿತೆಯ 200ನೇ ಪ್ರಕರಣದ ಅಡಿಯಲ್ಲಿ ಖಾಸಗಿ ದೂರನ್ನು ದಾಖಲಿಸುವ ಮೂಲಕ ಕ್ರಿಮಿನಲ್ ಕಾನೂನು ದಾವೆಯನ್ನು ಹೂಡಿರುವರು. ದೂರಿನಲ್ಲಿ 1ನೇ ಪ್ರತ್ಯರ್ಜಿದಾರನು 1ನೇ ಸಂಖ್ಯೆಯ ಆಪಾದಿತನಾದ (ಕೊಗುಂಡಿ ದ್ಯಾಮಣ್ಣ) ಮತ್ತು 9ನೇ ಸಂಖ್ಯೆಯ ಆಪಾದಿತನಾದ (ಎಂ.ಎನ್.ಕರಿಬಸವೇಗೌಡ) ಇವರಿಬ್ಬರು

ಸ್ನೇಹಿತರಾಗಿರುವರು ಮತ್ತು 9ನೇ ಸಂಖ್ಯೆಯ ಆಪಾದಿತನು ಡಿ.ಸಿ.ಸಿ. ಬ್ಯಾಂಕ್‌ನ ಉಪಾಧ್ಯಕ್ಷ ಹುದ್ದೆಯ ಪ್ರಭಾವವನ್ನು ಬಳಸಿಕೊಂಡು ಕಾನೂನುಬಾಹಿರವಾಗಿ ಮತ್ತು ಕಪ್ಪು ಹಣದ ಪೈಕಿಯಿಂದ ಹಲವು ಸ್ವತ್ತುಗಳನ್ನು ಖರೀದಿಸಿರುವರು ಮತ್ತು 9ನೇ ಸಂಖ್ಯೆಯ ಆಪಾದಿತನು ತನ್ನ ಪದವನ್ನು ದುರುಪಯೋಗ ಮಾಡಿಕೊಂಡು ಅಕ್ರಮಗಳ ಮುಖಾಂತರ ಸಾಕಷ್ಟು ಹಣವನ್ನು ಸಂಪಾದಿಸಿದ್ದಾನೆ ಮತ್ತು ಅವನ ತಾಯಿ, ಹೆಂಡತಿ ಮತ್ತು ಅವನ ಸಂಬಂಧಿಕರ ಹೆಸರಿನಲ್ಲಿ ಅನೇಕ ಸ್ವತ್ತುಗಳನ್ನು ಖರೀದಿಸಿದ್ದಾನೆ. ಆಪಾದಿತ 2 ಇವರು, ಆಪಾದಿತ 5 ಮತ್ತು ಆಪಾದಿತ 9 ಇವರ ತಾಯಿ ಆಗಿರುವರು. 3ನೇ ಆಪಾದಿತ, 5ನೇ ಆಪಾದಿತನ ಮಾವನಾಗಿರುವನು. 4ನೇ ಆಪಾದಿತೆ, 5ನೇ ಆಪಾದಿತನ ಹೆಂಡತಿಯಾಗಿರುವಳು ಮತ್ತು 3ನೇ ಆಪಾದಿತನ ಮಗಳಾಗಿರುವಳು. 5ನೇ ಆಪಾದಿತನು ಆಹಾರ ಪರಿಶೀಲಕರಾಗಿ ಕಾರ್ಯ ನಿರ್ವಹಿಸುತ್ತಿರುವರು. 9ನೇ ಆಪಾದಿತನು, 5ನೇ ಆಪಾದಿತನ ಸಹೋದರ ನಾಗಿರುವನು. 6ನೇ ಮತ್ತು 7ನೇ ಆಪಾದಿತರು, 3ನೇ ಆಪಾದಿತನ ಗಂಡುಮಕ್ಕಳಾಗಿರುವರು. 8ನೇ ಆಪಾದಿತಳು 9ನೇ ಆಪಾದಿತನ ಹೆಂಡತಿಯಾಗಿರುವಳು.

3. 9ನೇ ಸಂಖ್ಯೆಯ ಆಪಾದಿತನ ವಿರುದ್ಧ ಆಪಾದಿಸಲಾದ ದೂರಿನಲ್ಲಿ 9ನೇ ಆಪಾದಿತನು ತನ್ನ ತಾಯಿಯಾಗಿರುವ 2ನೇ ಆಪಾದಿತಳ ಹೆಸರಿನಲ್ಲಿ ದೇವಗೊಂಡನಹಳ್ಳಿ ಗ್ರಾಮ, ಹಡಗಲಿ ತಾಲೂಕು ಇಲ್ಲಿ ಈ ಕೆಳಗಿನ ಸ್ವತ್ತುಗಳನ್ನು ಖರೀದಿಸಿದ್ದಾನೆ ಎಂದು ಆರೋಪಿಸಿದ್ದಾನೆ:

| ಕ್ರ.ಸಂ. | ಕಂದಾಯ ಸರ್ವೇ ಸಂಖ್ಯೆ | ವಿಸ್ತೀರ್ಣ |
|---|---|---|
| 1. | 40/ಬಿ | 2 ಎಕರೆ 24 ಗುಂಟೆ |
| 2. | 137/ಬಿ | 11 ಎಕರೆಗಳು |
| 3. | 42/ಬಿ | 2 ಎಕರೆಗಳು |
| 4. | 42/ಬಿ | 3 ಎಕರೆ 89 ಸೆಂಟ್‌ಗಳು |
| 5. | 28 | 3 ಎಕರೆ 4 ಗುಂಟೆ |
| 6. | 270 | 3 ಎಕರೆ 75 ಸೆಂಟ್‌ಗಳು |

ಮುಂದುವರೆದು, 1ನೇ ಮತ್ತು 9ನೇ ಆಪಾದಿತರು ಹರಪನಹಳ್ಳಿ ಗ್ರಾಮ, ಕಸಬಾ ಹೋಬಳಿ, ಹರಪನಹಳ್ಳಿ ತಾಲೂಕಿನಲ್ಲಿರುವ ಈ ಕೆಳಗಿನ ಸ್ವತ್ತುಗಳನ್ನು 4 ರಿಂದ 7ನೇ ಆಪಾದಿತರ ಹೆಸರಿನಲ್ಲಿ ಖರೀಸಲಾಗಿದೆ.

| ಕ್ರ.ಸಂ. | ಕಂದಾಯ ಸರ್ವೇ ಸಂಖ್ಯೆ | ವಿಸ್ತೀರ್ಣ |
|---|---|---|
| 1. | 37 | 7 ಎಕರೆ 21 ಸೆಂಟ್‌ಗಳು |

ಹಾಗೆಯೇ, 1 ಮತ್ತು 9ನೇ ಸಂಖ್ಯೆಯ ಆಪಾದಿತರು ಹರಪನಹಳ್ಳಿ ವಾರ್ಡ್ ಸಂಖ್ಯೆ.1 ರಲ್ಲಿ ಇರುವ 80x50 ಅಡಿ ವಿಸ್ತೀರ್ಣದ ನಿವೇಶನ ಸಂಖ್ಯೆ: 364–365ನ್ನು 4ನೇ ಸಂಖ್ಯೆಯ ಆಪಾದಿತನ ಹೆಸರಿನಲ್ಲಿ ಖರೀದಿಸಲಾಗಿದೆ ಮತ್ತು 3ನೇ ಸಂಖ್ಯೆ ಆಪಾದಿತನು 365ನೇ ಸಂಖ್ಯೆಯ ನಿವೇಶನದಲ್ಲಿ ಮನೆಯನ್ನು ಕಟ್ಟಿರುವನು. ಆಪಾದಿತರು ಖರೀದಿಸಿರುವ ಇತರ ನಿವೇಶನಗಳು ಈ ಕೆಳಗಿನಂತಿದೆ:

| ಖರೀದಿದಾರ | *ನಿವೇಶನ* | *ಸ್ಥಳ* | *ಇವರ ಹೆಸರಿನಲ್ಲಿ* |
|---|---|---|---|
| ಆಪಾದಿತ 1 ಮತ್ತು 9 | 60 X 40 ಅಡಿಗಳು | ರಾಜರಾಜೇಶ್ವರಿ ನಗರ, ಬೆಂಗಳೂರು | ಆಪಾದಿತ 1 ಮತ್ತು 9 |
| ಆಪಾದಿತ 1 ಮತ್ತು 9 | 50 X 80 ಅಡಿಗಳು | ವಿಶ್ವೇಶ್ವರ ನಗರ, ಬೆಂಗಳೂರು | ಆಪಾದಿತ 1 ಮತ್ತು 9 |
| ಆಪಾದಿತ 9 | 23 ಎಕರೆ | ಹದಗಲಿ ಗ್ರಾಮ | ಸ್ವತಃ |
| ಆಪಾದಿತ 9 | 65 X 45 ಅಡಿಗಳು | | ಪ್ರತ್ಯರ್ಜಿದಾರ 8ರ ಪತಿ |
| ಆಪಾದಿತ 9 | 20 ಎಕರೆ | ನಾಗೇನಹಳ್ಳಿ ಗ್ರಾಮ | ಆಪಾದಿತ 8 |
| ಆಪಾದಿತ 9 | ಮನೆ ಸಂಖ್ಯೆ 16 (60 X 40) | ಬಸವೇಶ್ವರ ಲೇಔಟ್ ಹೊಸಪೇಟೆ ತಾಲ್ಲೂಕು | ಆಪಾದಿತ 8 |
| ಆಪಾದಿತ 9 | ಬಂಗಲೆ | ಚಿತ್ರದುರ್ಗ | ಆಪಾದಿತ 1 |

4. ಮುಂದುವರೆದು, ದೂರಿನಲ್ಲಿ 2013ರ ನವೆಂಬರ್‌ನ ಮೊದಲ ವಾರದಲ್ಲಿ, 1, 5 ಮತ್ತು 9 ಸಂಖ್ಯೆಯ ಆಪಾದಿತರು ದೂರುದಾರನ ಅಂಗಡಿಯ ಹತ್ತಿರ ಬಂದು ದೂರುದಾರನನ್ನು ಅಸಭ್ಯ ಭಾಷೆಯ ಬೈಗುಳಗಳಿಂದ ನಿಂದಿಸಿದ ಬಗ್ಗೆ ಮತ್ತು ದೂರುದಾರನಿಗೆ ಹಾಕಿದ ಜೀವಬೆದರಿಕೆಯನ್ನು ಸಹ ದೂರುದಾರನು ದೂರಿನಲ್ಲಿ ಆರೋಪಿಸಿರುತ್ತಾನೆ. ಈ ಎಲ್ಲ ಆಪಾದನೆಗಳ ಆಧಾರದ ಮೇಲೆ ದೂರುದಾರನು ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, 1988ರ 8 ಮತ್ತು 9ನೇ ಪ್ರಕರಣದ ಅಡಿಯಲ್ಲಿ ಮತ್ತು ಭಾರತ ದಂಡ ಸಂಹಿತೆಯ 34, 143, 504, 506 ಮತ್ತು 198ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧ ಆಪಾದನೆಗಾಗಿ ಅರ್ಜಿದಾರನ ವಿರುದ್ಧ ಕ್ರಮಕೈಗೊಳ್ಳಲು ಮತ್ತು 1 ರಿಂದ 9ನೇ ಸಂಖ್ಯೆಯ ಆಪಾದಿತರು ಅಕ್ರಮವಾಗಿ ಸಂಪಾದಿಸಿದ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಕೋರಿರುವರು. ಮೇಲಿನ ವ್ಯವಹರಣೆಗಳು 1ನೇ ಸಂಖ್ಯೆ ಆಪಾದಿತ ಕ್ರಿಮಿನಲ್ ರಿಟ್ ಅರ್ಜಿ ಸಂಖ್ಯೆ 8034/2013 ಮತ್ತು 2 ರಿಂದ 9ನೇ ಸಂಖ್ಯೆ ಆಪಾದಿತರ ಕ್ರಿಮಿನಲ್ ರಿಟ್ ಅರ್ಜಿ ಸಂಖ್ಯೆ: 7948/2013ರಲ್ಲಿ ಅರ್ಜಿದಾರರಾಗಿರುವರು.

5. ದಿನಾಂಕ 2.12.2013ರಲ್ಲಿ ಈ ದೂರನ್ನು ದಾಖಲಿಸಲಾಗಿದೆ ಮತ್ತು ಅಪೀಲಿನ ಈ ದೂರಿನ ಸಂಬಂಧದಲ್ಲಿ ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ದಾವಣಗೆರೆ ನ್ಯಾಯಾಲಯವು ದಾವಣಗೆರೆಯ ಲೋಕಾಯುಕ್ತ ಪೊಲೀಸ್ ಅಧೀಕ್ಷಕರಿಗೆ ಕ್ರಿಮಿನಲ್ ದಂಡ ಪ್ರಕ್ರಿಯಾ ಸಂಹಿತೆಯ 156(3)ನೇ ಪ್ರಕರಣದ ಅಡಿಯಲ್ಲಿ ತನಿಖೆ ಮಾಡುವುದಕ್ಕೆ ನಿರ್ದೇಶಿಸಿ ಆದೇಶಿಸಿದೆ. ಸದರಿ ಆದೇಶಕ್ಕೆ ಅನುಗುಣವಾಗಿ, ಲೋಕಾಯುಕ್ತ ಪೊಲೀಸರು ದಾವಣಗೆರೆ ಜಿಲ್ಲೆಯಲ್ಲಿ, ಈ ಮೊಕದ್ದಮೆಯನ್ನು ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ 8 ಮತ್ತು 9ನೇ ಪ್ರಕರಣದ ಅಡಿಯಲ್ಲಿ ಮತ್ತು ಭಾರತ ದಂಡ ಸಂಹಿತೆಯ 34, 143, 504, 506, 198 ಪ್ರಕರಣಗಳ ಅಡಿಯಲ್ಲಿ ಕ್ರಿಮಿನಲ್ ಸಂಖ್ಯೆ 107/2013 ದಿನಾಂಕ 10.12.2013ರಂದು ನೋಂದಾಯಿಸಿಕೊಂಡಿರುವರು. ಪ್ರತ್ಯರ್ಜಿದಾರರ ಈ ಕ್ರಮದಿಂದ ಬಾಧಿತರಾದ ಅರ್ಜಿದಾರರು ನೋಂದಾಯಿತವಾದ ಎಫ್‌ಐಆರ್ ಅನ್ನು ಮತ್ತು

ತತ್ಪರಿಣಾಮದ ತನಿಖೆಯನ್ನು ವಜಾ ಮಾಡುವುದಕ್ಕೆ ಕೋರಿ ಈ ಅರ್ಜಿಗಳನ್ನು ದಾಖಲಿಸಿರುವರು.

6. ನಾನು, ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ನ್ಯಾಯವಾದಿಗಳ ಮತ್ತು ದೂರುದಾರ/ಪ್ರತ್ಯರ್ಜಿದಾರ ಸಂಖ್ಯೆ 1ರ ಪರವಾಗಿ ಹಾಜರಾದ ಮಾನ್ಯ ವಕೀಲರ ಹಾಗೂ ಅವರಂತೆಯೇ ಪ್ರತ್ಯರ್ಜಿದಾರ ಸಂಖ್ಯೆ.2 ಆಗಿರುವ ಕರ್ನಾಟಕ ಲೋಕಾಯುಕ್ತ ಪರವಾಗಿ ಹಾಜರಾದ ಪಬ್ಲಿಕ್ ಪ್ರಾಸಿಕ್ಯೂಟರ್ ಅವರ ವಾದಗಳನ್ನು ಆಲಿಸಿದ್ದೇನೆ.

7. ಅರ್ಜಿದಾರರ ಪರವಾಗಿ ಮಾನ್ಯ ಹಿರಿಯ ನ್ಯಾಯವಾದಿಗಳು ದುರುದ್ದೇಶದ ಸಂಚಿನೊಂದಿಗೆ ಮತ್ತು ಗುಪ್ತ ಉದ್ದೇಶದಿಂದ ಈ ಕ್ರಿಮಿನಲ್ ವ್ಯವಹರಣೆಗಳನ್ನು ಹೂಡಲಾಗಿದೆ ಎಂದು ವಾದಿಸಿರುವರು. ದೂರುದಾರನು ಅಧಿಕ ಪ್ರಸಂಗಿಯಾಗಿರುವನು ಮತ್ತು ಸರ್ಕಾರಿ ಅಧಿಕಾರಿಗಳ ವಿರುದ್ಧ ಕೃತಿಮವಾದ ಮತ್ತು ಆಧಾರ ರಹಿತ ಆರೋಪಗಳನ್ನು ಮಾಡುವುದೇ ದೂರುದಾರನ ಸ್ವಭಾವವಾಗಿದೆ ಮತ್ತು ದೂರುದಾರನು ಈ ಹಿಂದೆಯೂ ಸಾಕಷ್ಟು ಇದೇ ಬಗೆಯ ಕೆಲಸದಲ್ಲಿ ತೊಡಗಿಕೊಂಡಿರುವುದು ಕಂಡು ಬರುತ್ತದೆ. ಮಾನ್ಯ ನ್ಯಾಯವಾದಿಗಳು 2013ನೇ ವರ್ಷದಿಂದ ದೂರುದಾರನು ಸ್ವತಃ ಇದುವರೆಗೂ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಸಂಗ್ರಹಿಸಿರುವ ಮಾಹಿತಿಯನ್ನು ನ್ಯಾಯಾಲಯಕ್ಕೆ ನಿವೇದಿಸಿರುವನು, ಅದರಂತೆ ಪ್ರತ್ಯರ್ಜಿದಾರರ ಸಂಖ್ಯೆ 1 /ದೂರುದಾರನು ಸರ್ಕಾರಿ ನೌಕರರ ಮತ್ತು ಇತರ ತನ್ನ ರಾಜಕೀಯ ಪ್ರತಿಸ್ಪರ್ಧಿಗಳ ವಿರುದ್ಧ ಇದುವರೆವಿಗೂ ಸುಮಾರು 92 ಖಾಸಗೀ ದೂರುಗಳನ್ನು ದಾಖಲಿಸಿರುವನು. ಇಂತಹ ಸನ್ನಿವೇಶಗಳ ಅಡಿಯಲ್ಲಿ ಮಾನ್ಯ ವಿಶೇಷ ನ್ಯಾಯಾಧೀಶರು ಪ್ರತ್ಯರ್ಜಿದಾರ ಸಂಖ್ಯೆ.1 ಮಾಡಿದ ಖಾಸಗಿ ದೂರಿನ ಮೇಲೆ, ದೂರಿನಲ್ಲಿ ಮಾಡಿದ ಆರೋಪಗಳಿಗೆ ನ್ಯಾಯಿಕ ಮನಸ್ಥಿತಿಯನ್ನು ಅನ್ವಯಿಸಿಕೊಳ್ಳದೇ ಯಾಂತ್ರಿಕವಾಗಿ ನಡೆದುಕೊಳ್ಳಬಾರದಾಗಿತ್ತು. ಮುಂದುವರೆದು ಮಾನ್ಯ ನ್ಯಾಯವಾದಿಗಳು ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ 8 ಮತ್ತು 9ನೇ ಪ್ರಕರಣದ ಅಡಿಯಲ್ಲಿ ಅಪರಾಧಗಳು ಅನ್ವಯವಾಗದಿದ್ದರೂ ಅದನ್ನು ತಳಕು ಹಾಕುವ ರೀತಿ ದೂರಿನಲ್ಲಿ ಆರೋಪಗಳನ್ನು

ಮಾಡಲಾಗಿದೆ ಎಂದು ನ್ಯಾಯಾಲಯಕ್ಕೆ ನಿವೇದಿಸಿರುವರು. ಆದರೆ, ಖಾಸಗೀ ದೂರಿನಲ್ಲಿ ಮಾಡಲಾದ ಆರೋಪಗಳ ಹೊರತಾಗಿ ಮತ್ತು ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ 8 ಮತ್ತು 9ನೇ ಪ್ರಕರಣದಲ್ಲಿ ನಮೂದಿಸಿರುವ ಅಂಶಗಳು ಈ ಎಲ್ಲಾ ಆರೋಪಗಳು ತೃಪ್ತಿದಾಯಕವಾಗಿರುವುದು ಮೇಲ್ನೋಟಕ್ಕೆ ಕಂಡು ಬರದ ಹೊರತು, ಮಾನ್ಯ ವಿಶೇಷ ನ್ಯಾಯಾಧೀಶರು ಯಾಂತ್ರಿಕವಾಗಿ ಲೋಕಾಯುಕ್ತ ಪೊಲೀಸ್ ಅಧೀಕ್ಷಕರಿಗೆ ಈ ದೂರಿನ ತನಿಖೆ ಮಾಡುವುದಕ್ಕಾಗಿ ಉಲ್ಲೇಖಿಸಿರುವುದು ದೋಷಪೂರ್ಣವಾಗಿದೆ. ಈ ವಾದಕ್ಕೆ ಪೂರಕವಾಗಿ, ಭಾರತದ ಸರ್ವೋಚ್ಚ ನ್ಯಾಯಾಲಯವು ***ಪ್ರಿಯಾಂಕ ಶ್ರೀ ವಾಸ್ತವ ಮತ್ತು ಮತ್ತೊಬ್ಬರು –ವಿರುದ್ಧ– ಉತ್ತರ ಪ್ರದೇಶ ರಾಜ್ಯ ಮತ್ತು ಇತರರು*** [1], ಮೊಕದ್ದಮೆಯಲ್ಲಿ ಅದು ನೀಡಿದ ನಿರ್ಣಯವನ್ನು ಇಲ್ಲಿ ನಿದರ್ಶನ ಪೂರ್ವಕವಾಗಿ ಮಾನ್ಯ ನ್ಯಾಯವಾದಿಗಳು ನಿವೇದಿಸಿರುವರು ಮತ್ತು ಘನ ಸರ್ವೋಚ್ಚ ನ್ಯಾಯಾಲಯವು ನೀಡಿದ ಮೇಲಿನ ಮೊಕದ್ದಮೆಯ ನಿರ್ಣಯದಲ್ಲಿ ಸ್ಪಷ್ಟವಾಗಿ ಮಂಡಿಸಿದ ಹೇಳಿಕೆ ಹೀಗಿದೆ. ಕ್ರಿಮಿನಲ್ ದಂಡ ಪ್ರಕ್ರಿಯಾ ಸಂಹಿತೆಯ 156(3)ನೇ ಪ್ರಕರಣದ ಅಡಿಯಲ್ಲಿ ಲಭ್ಯ ಪರಿಹಾರೋಪಾಯಗಳನ್ನು ಮತ್ತು ನ್ಯಾಯಿಕ ಮನೋಸ್ಥಿತಿಯ ಅರ್ಜಿಯನ್ನು ಅಗತ್ಯಪಡಿಸಿ ಅದರ ಅಧಿಕಾರವನ್ನು ಚಲಾಯಿಸಲು ಸಾಮಾನ್ಯ ಸ್ವರೂಪದಲ್ಲಿ ಸಾಧ್ಯವಾಗುವುದಿಲ್ಲ. ಆದುದರಿಂದ ಈ ಏಕೈಕ ಕಾರಣದ ಮೇಲೆ ಪ್ರಶ್ನಿತ ವ್ಯವಹರಣೆಗಳನ್ನು ಅಗತ್ಯವಾಗಿ ವಜಾ ಮಾಡಬೇಕಾಗುತ್ತದೆಯೆಂದು ನಿವೇದಿಸಿದ್ದಾರೆ.

8. ಮುಂದುವರೆದು, ಮಾನ್ಯ ನ್ಯಾಯವಾದಿಗಳು ದೂರುದಾರನು ತನ್ನ ಅರ್ಜಿಯಲ್ಲಿ ಮಾಡಿದ ಆರೋಪಗಳನ್ನು ಸಮರ್ಥಿಸುವ ಸಂಬಂಧದಲ್ಲಿ ಯಾವುದೇ ದಸ್ತಾವೇಜುಗಳನ್ನು ಹಾಜರುಪಡಿಸಿರುವುದಿಲ್ಲ ಎಂದು ಸಹ ನಿವೇದಿಸಿರುವರು. ದೂರುದಾರನು ದೂರಿನ ವಿಯಷಕ್ಕೊಳಪಟ್ಟಂತೆ ದೂರಿನೊಂದಿಗೆ ದೂರಿಗೆ ಅತಿ ದೂರವಾದ ಸಂಬಂಧಪಟ್ಟ ಇನ್ನಿತರ, ಸಂಶಯಾಸ್ಪದ ದಸ್ತಾವೇಜುಗಳನ್ನು ಸಹ ಅರ್ಜಿಯೊಂದಿಗೆ ಹಾಜರುಪಡಿಸಿರುವುದಿಲ್ಲ. ದೂರುದಾರನು ದೂರಿನಲ್ಲಿ ಮಾಡಿದ ಆರೋಪಗಳನ್ನು ಸಮರ್ಥಿಸುವ ಸಲುವಾಗಿ ಮತ್ತು ಯಾವುವೇ ಅಪರಾಧ ಮಾಡಿರುವ

1. (2015) 6 ಎಸ್‌ಸಿಸಿ 287

ಸಂಬಂಧದಲ್ಲಿ ಯಾವುವೇ ಚರ್ಚೆಗೆ ಗ್ರಾಸವಾದ ದಸ್ತಾವೇಜುಗಳನ್ನು ಸಹ ಬಹಿರಂಗಪಡಿಸಿರುವುದಿಲ್ಲ. ಈ ಸಂಬಂಧದಲ್ಲಿ ಕ್ರಿಮಿನಲ್ ಅರ್ಜಿ ಸಂಖ್ಯೆ 7948/2013ರಲ್ಲಿನ 4 ಮತ್ತು 8ನೇ ಸಂಖ್ಯೆಯ ಅರ್ಜಿದಾರರು ಸರ್ಕಾರಿ ನೌಕರರಾಗಿರುವರು. 4ನೇ ಅರ್ಜಿದಾರನು (5ನೇ ಸಂಖ್ಯೆಯ ಆರೋಪಿ) ಬಾಗಲಕೋಟೆ ಜಿಲ್ಲೆಯ ಬಾದಾಮಿಯಲ್ಲಿ ಆಹಾರ ಪರಿಶೀಲಕನಾಗಿರುವನು ಮತ್ತು 8ನೇ ಸಂಖ್ಯೆಯ ಅರ್ಜಿದಾರನು (9ನೇ ಸಂಖ್ಯೆಯ ಆರೋಪಿ) ಗದಗ್‌ನ ಹೆಸ್ಕಾಂ ಜಾಗೃತ ವಿಭಾಗದಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಕಾರ್ಯ ನಿರ್ವಹಿಸುತ್ತಿರುವನು ಸರ್ಕಾರಿ ನೌಕರರನ್ನು ವಿಚಾರಣೆ ಮಾಡುವುದಕ್ಕೆ ಸಿಂಧುವಾದ ಪೂರ್ವಾನುಮತಿಯನ್ನು ಪಡೆದುಕೊಳ್ಳಲು ಅಗತ್ಯಪಡಿಸಿದೆ. ದೂರುದಾರನು ಅಂತಹ ಯಾವುದೇ ಸಿಂಧುವಾದ ಅನುಮತಿಯನ್ನು ಪಡೆದುಕೊಂಡಿರುವುದಿಲ್ಲ. ಆದುದರಿಂದ ವಿಶೇಷ ನ್ಯಾಯಾಲಯ ಈ ದೂರನ್ನು ಪುರಸ್ಕರಿಸಬಾರದು ಎಂದು ಸಹ ನಿವೇದಿಸಿರುವರು.

9. ಈ ಸಂದರ್ಭದಲ್ಲಿಯೇ ಮಾನ್ಯ ನ್ಯಾಯವಾದಿಗಳು, ದೂರಿನಲ್ಲಿ ಮಾಡಲಾದ ಆರೋಪಗಳಿಗೆ ಸಂಬಂಧಪಟ್ಟಂತೆ ಲೋಕಾಯುಕ್ತ ಪೊಲೀಸರು ಈಗಾಗಲೇ ಮೂರು ವಿಚಾರಣೆಗಳನ್ನು ನಡೆಸಿರುವರು ಮತ್ತು ದಿನಾಂಕ 29.1.2009, 13.03.2009, 12.7.2013ರಲ್ಲಿ ವರದಿಗಳನ್ನು ದಾಖಲಿಸಿರುವರು. ಈ ವರದಿಯಲ್ಲಿ 8ನೇ ಸಂಖ್ಯೆಯ ಅರ್ಜಿದಾರ (9ನೇ ಸಂಖ್ಯೆಯ ಆರೋಪಿ)ನಿಗೆ ನಿರ್ದೋಷಿ ಎಂದು ವರದಿ ನೀಡಿರುತ್ತಾರೆ. ಸದರಿ ಸಂದರ್ಭಗಳ ಅಡಿಯಲ್ಲಿ, ಅನಪೇಕ್ಷಿತ ಸಂಗತಿ ಮತ್ತು ಆರೋಪಗಳನ್ನು ವಿಚಾರಣೆ ಮಾಡುವ ನಿರ್ದೇಶನವು ಅರ್ಜಿದಾರರ ಕಾನೂನು ಸಮ್ಮತ ಹಕ್ಕುಗಳಿಗೆ ಧಕ್ಕೆಯಾಗಿದೆ ಎಂದು ನಿವೇದಿಸಿರುವರು. ಮಾನ್ಯ ನ್ಯಾಯವಾದಿಗಳು ಮುಂದುವರೆದು, ಅರ್ಜಿದಾರರೆಲ್ಲರು ಪ್ರತ್ಯೇಕವಾಗಿ ವಾರ್ಷಿಕ ಆದಾಯ ತೆರಿಗೆ ರಿಟರ್ನ್ ಸಲ್ಲಿಸಿರುವರು ಮತ್ತು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ವೃತ್ತಿ ತೆರಿಗೆಯನ್ನು ನಿಯತವಾಗಿ ಸಂದಾಯ ಮಾಡಿರುತ್ತಾರೆ ಮತ್ತು ಅರ್ಜಿದಾರರು ಖರೀದಿ ಮಾಡಿರುವ ಸ್ವತ್ತುಗಳನ್ನು ಖರೀದಿ ಮಾಡುವ ಮುಂಚೆ ಸಕ್ಷಮ ಪ್ರಾಧಿಕಾರದ ಸಮ್ಮತಿ ಮತ್ತು ಪೂರ್ವಾನುಮತಿಯನ್ನು ಅವರು ಪಡೆದುಕೊಂಡಿರುತ್ತಾರೆ ಹಾಗೂ ಅವರುಗಳು ಯಾವುದೇ ಅಕ್ರಮ ವ್ಯವಹರಣೆಗಳಲ್ಲಿ ತೊಡಗಿಸಿಕೊಂಡಿರುವುದಿಲ್ಲ ಮತ್ತು ಈ ಎಲ್ಲ ಸದರಿ ಸನ್ನಿವೇಶಗಳ

ಅಡಿಯಲ್ಲಿ ದೂರುದಾರನು ದೂರಿನಲ್ಲಿ ಮಾಡಿದ ಆರೋಪಗಳೆಲ್ಲ ಆಧಾರ ರಹಿತವಾದವು ಮತ್ತು ನಿರಾಧಾರವಾದವುಗಳಾಗಿವೆ. ಆದುದರಿಂದ ಅರ್ಜಿದಾರರ ವಿರುದ್ಧ ನಡೆದಿರುವ ಕ್ರಿಮಿನಲ್ ವ್ಯವಹರಣೆಗಳನ್ನು ಪುರಸ್ಕರಿಸಬಾರದು ಎಂದು ವಿನಂತಿಸಿರುವರು. ಹಾಗಾಗಿ ಮಾನ್ಯ ನ್ಯಾಯವಾದಿಗಳು ವ್ಯವಹರಣೆಗಳನ್ನು ವಜಾ ಮಾಡುವಂತೆ ತಮ್ಮ ಅಪೀಲು ಅರ್ಜಿಯಲ್ಲಿ ಕೋರಿರುತ್ತಾರೆ.

10. ಮತ್ತಷ್ಟು ಮುಂದುವರೆದು ಮಾನ್ಯ ನ್ಯಾಯವಾದಿಗಳು, ದೂರುದಾರನು ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ ಅಡಿಯಲ್ಲಿ ಆಪಾದನೆಗಳನ್ನು ಮಾಡಿರುವುದೇ ಅಲ್ಲದೆ, ಭಾರತ ದಂಡ ಸಂಹಿತೆಯ ಅಡಿಯಲ್ಲೂ ಆಪಾದನೆಗಳನ್ನು ಮಾಡಿರುತ್ತಾನೆ ಅಂದರೆ ಲೋಕಾಯುಕ್ತ ಪೊಲೀಸರು ಅಧಿಕಾರ ವ್ಯಾಪ್ತಿಯಲ್ಲಿ ವಿಚಾರಣೆ ನಡೆಸುವಂತಹ ಆ ಯಾವುವೇ ಆಪಾದನೆಗಳ ಸದರಿ ಆಪಾದನೆಗಳು ಆ ರೀತಿಯ ಆಪಾದನೆಗಳಾಗುವಂತೆ, ಪ್ರತ್ಯರ್ಜಿದಾರ ಸಂಖ್ಯೆ 2 ಆಗಿರುವ ಲೋಕಾಯುಕ್ತದಲ್ಲಿ ಈ ಮೊಕದ್ದಮೆ ನೋಂದಣಿಯಾಗುವುದಕ್ಕಾಗಿ ಪೂರಕವಾಗಿ ಭಾರತ ದಂಡ ಸಂಹಿತೆಯ 34, 143, 504, 506, 198 ಪ್ರಕರಣದ ಮೇರೆಗೆ ದೂರುದಾರನು ದೂರನ್ನು ದಾಖಲಿಸಿರುವುದು ಕಂಡು ಬರುತ್ತದೆ. ಈ ವಾದಾಂಶಕ್ಕೆ ಪೂರಕವಾಗಿ, ***ಮಾನ್ಯ ಹಿರಿಯ ನ್ಯಾಯವಾದಿಗಳು ಅನಿಲ್ ಕುಮಾರ್ –ವಿರುದ್ಧ – ಎಂ.ಕೆ. ಅಯ್ಯಪ್ಪ***[2], ಮೊಕದ್ದಮೆಯ ನಿರ್ಣಯವನ್ನು ಉಲ್ಲೇಖಿಸಿರುವರು ಮತ್ತು ಅರ್ಜಿದಾರರ ವಿರುದ್ಧ ದೂರುದಾರರು ಕಿರುಕುಳ ಮತ್ತು ದ್ವೇಷದ ಉದ್ದೇಶ ಕಾರಣದಿಂದಲೇ ಕ್ರಿಮಿನಲ್ ವ್ಯವಹರಣೆಗಳನ್ನು ಪ್ರಾರಂಭಿಸಿರುತ್ತಾರೆಂದು ನಿವೇದಿಸುತ್ತಾ, ಆ ಕಾರಣದಿಂದಲೇ ಕ್ರಿಮಿನಲ್ ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಅಡಿಯಲ್ಲಿ ಅಧಿಕಾರವನ್ನು ಚಲಾಯಿಸಿ ಇಡೀ ವ್ಯವಹರಣೆಗಳನ್ನು ಅಗತ್ಯವಾಗಿ ವಜಾ ಮಾಡಬೇಕೆಂದು ನಿವೇದಿಸಿರುವರು.

11. ಮೊದಲನೇ ಪ್ರತ್ಯರ್ಜಿದಾರ/ದೂರುದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು ನೋಂದಾಯಿತವಾದ ಎಫ್‌ಐಆರ್ ಅನ್ನು ನಂತರದಲ್ಲಿ ಅರ್ಜಿದಾರರ

2. (2013) 10 ಎಸ್‌ಸಿಸಿ 705

ವಿವಿಧ ಸ್ಥಳಗಳಲ್ಲಿ ಲೋಕಾಯುಕ್ತ ಪೊಲೀಸರು ನಡೆಸಿದ ಶೋಧನೆಯಲ್ಲಿ ಭಾರೀ ಸಂಖ್ಯೆಯ ಸ್ವತ್ತುಗಳನ್ನು ಮತ್ತು ಆಸ್ತಿಗಳನ್ನು ಅರ್ಜಿದಾರರ ಸ್ವಾಧೀನದಲ್ಲಿರುವುದನ್ನು ಪತ್ತೆ ಹಚ್ಚಿ ಸಿದ್ಧಪಡಿಸಿದ ವರದಿಯನ್ನು ನ್ಯಾಯಾಲಯದ ಮುಂದೆ ಮಂಡಿಸಿರುವರು. ಈ ವರದಿಯ ಹಿನ್ನೆಲೆಯಲ್ಲಿ ಈ ಹಂತದಲ್ಲಿ, ಖಾಸಗೀ ದೂರಿನಲ್ಲಿ ಮಾಡಲಾದ ಆರೋಪಗಳು ಸುಳ್ಳು ಎಂದಾಗಲೀ ಅಥವಾ ದುರುದ್ದೇಶದಿಂದ ಕೂಡಿದೆ ಎಂದು ಹೇಳಲು ಬರುವುದಿಲ್ಲ ಎಂದು ನಿವೇದಿಸಿರುವರು. ಮಾನ್ಯ ನ್ಯಾಯವಾದಿಗಳು ಪ್ರಸ್ತುತ ಮೊಕದ್ದಮೆಯ ವಾಸ್ತವ ಸನ್ನಿವೇಶಗಳಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಅಡಿಯಲ್ಲಿ ವಿವೇಚಿಸಲು ಬರುವುದಿಲ್ಲವೆಂದು, ಅದರಲ್ಲೂ ಅರ್ಜಿದಾರರು ಸರ್ಕಾರಿ ನೌಕರರಾಗಿರುವರು. ಅವರು ತಮ್ಮ ಹಾಗೂ ತಮ್ಮ ಸ್ನೇಹಿತರ ಮತ್ತು ಸಂಬಂಧಿಕರುಗಳ ಹೆಸರಿನಲ್ಲಿ ಅಕ್ರಮ ಸಂಪಾದನೆಯನ್ನು ಸಂಗ್ರಹಿಸುವುದಕ್ಕಾಗಿ ತಮ್ಮ ಪದವನ್ನು ದುರ್ಬಳಕೆ ಮಾಡಿಕೊಂಡಿರುವುದು ಕಂಡುಬರುವುದರಿಂದ 482ನೇ ಪ್ರಕರಣದ ಅಡಿಯಲ್ಲಿನ ವಿವೇಚನೆಯಲ್ಲಿ ಚಲಾಯಿಸಲು ಬರುವುದಿಲ್ಲವೆಂದು ನಿವೇದಿಸಿರುವರು.

12. ಎರಡನೇ ಪ್ರತ್ಯರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಈ ಮುಂದಿನ ನಿರ್ಣಯಗಳನ್ನು ಸದರಿ ಮೊಕದ್ದಮೆಗೆ ಆಧಾರವಾಗಿ ಉಲ್ಲೇಖಿಸಿರುವರು ಎಂದರೆ,–

1. ***ಎಂ.ಕೃಷ್ಣ –ವಿರುದ್ಧ– ಕರ್ನಾಟಕ ರಾಜ್ಯ***[3];
2. ***ರಿಷಿಪಾಲ್ ಸಿಂಗ್ –ವಿರುದ್ಧ– ಉತ್ತರ ಪ್ರದೇಶ ರಾಜ್ಯ ಮತ್ತು ಮತ್ತೊಬ್ಬರು***[4].

3. ಎಐಆರ್ 1999 ಎಸ್‌ಸಿ 1765
4. ಎಐಆರ್ 2014 ಎಸ್‌ಸಿ 2567

ಮತ್ತು ಈ ನಿರ್ಣಯದಲ್ಲಿ ಎರ್ನಕುಲಂ ಉಚ್ಚ ನ್ಯಾಯಾಲಯದಲ್ಲಿ ***ಮಾನೀಶ್ ಇ. –ವಿರುದ್ಧ– ಕೇರಳ ರಾಜ್ಯ ಮತ್ತು ಇತರರು***[5] ಮೊಕದ್ದಮೆಯಲ್ಲಿ ನಿರ್ಣಯವನ್ನು ಉಲ್ಲೇಖಿಸಿರುವರು. ಅದರಲ್ಲಿ ಕಾನೂನಿಗೆ ಅನುಗುಣವಾಗಿರುವ ಉಲ್ಲೇಖಿತ ದೂರಿನಲ್ಲಿ ಮಾನ್ಯ ಮ್ಯಾಜಿಸ್ಟ್ರೇಟರು ಚಲಾಯಿಸಿರುವ ಅಧಿಕಾರ ವ್ಯಾಪ್ತಿಯನ್ನು ನಿವೇದಿಸಿರುವರು. ದೂರಿನಲ್ಲಿ ಮಾಡಲಾದ ಆರೋಪಗಳು ಮೇಲ್ನೋಟಕ್ಕೆ ಅದರಲ್ಲಿ ಉಲ್ಲೇಖಿತವಾದ ವಿವಿಧ ಉಪಬಂಧಗಳ ಅಡಿಯಲ್ಲಿ ಎಸಗಲಾದ ಅಪರಾಧಗಳು ಬಹಿರಂಗವಾಗಿರುವುದರಿಂದ ಸದರಿ ವ್ಯವಹರಣೆಗಳನ್ನು ವಜಾ ಮಾಡಲು ಕೋರುವುದಕ್ಕೆ ಇತರ ಯಾವುದೇ ಸಮರ್ಥನೆಗಳು ಇರುವುದಿಲ್ಲ.

13. ಪ್ರತ್ಯರ್ಜಿದಾರ ಸಂಖ್ಯೆ 2ರ ಪರವಾಗಿ ಮಾನ್ಯ ನ್ಯಾಯವಾದಿಗಳು, ನ್ಯಾಯಾಲಯ ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಅಡಿಯಲ್ಲಿ ಅಧಿಕಾರವನ್ನು ಚಲಾಯಿಸಿದ್ದಲ್ಲಿ, ಮಾಡಲಾದ ಆರೋಪದಲ್ಲಿ, ಮೇಲ್ನೋಟದಲ್ಲಿ ಕಂಡು ಬರುವ ಆಪಾದನೆಗಳಲ್ಲಿ ಹುರುಳಿದೆಯೇ ಅಥವಾ ಹುರುಳಿಲ್ಲವೇ ಎಂಬುದನ್ನು ಒಮ್ಮೆಯಾದರೂ ನ್ಯಾಯಾಲಯದ ಗಮನಕ್ಕೆ ತಂದುಕೊಳ್ಳಬೇಕಾಗುತ್ತದೆ ಮತ್ತು ಹಾಗೇನಾದರೂ ಗಮನಕ್ಕೆ ತಂದುಕೊಳ್ಳದಿದ್ದರೆ ಮೊಕದ್ದಮೆ ವಿವಾದಿತ ಪ್ರಶ್ನಿತ ಸಂಗತಿಯನ್ನು ಪರಿಶೀಲಿಸಲು ಸಾಧ್ಯವಾಗುವುದಿಲ್ಲ. ಆದುದರಿಂದ ಈ ವ್ಯವಹರಣೆಗಳನ್ನು ವಜಾ ಮಾಡುವುದಕ್ಕೆ ಇತರ ಯಾವುದೇ ಕಾರಣಗಳು ಇರುವುದಿಲ್ಲ.

14. ನಾನು, ಸಂಬಂಧಪಟ್ಟ ಪಕ್ಷಕಾರರು ಮಾಡಿದ ನಿವೇದನೆಗಳನ್ನು ಬಹಳ ಎಚ್ಚರಿಕೆಯಿಂದ ಕೂಲಂಕಷವಾಗಿ ಆಲಿಸಿರುವೆ ಮತ್ತು ದೂರಿನಲ್ಲಿ ಕಂಡು ಬಂದ ಆಪಾದನೆಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿರುವೆ ಅದರಂತೆಯೇ ಮಾನ್ಯ ವಿಶೇಷ ನ್ಯಾಯಾಧೀಶರು ತೆಗೆದುಕೊಂಡು ಕ್ರಮಗಳನ್ನು ಪರಾಮರ್ಶಿಸಿದ್ದೇನೆ.

15. ಈ ಮೊದಲು, ಖಾಸಗೀ ದೂರು ದಿನಾಂಕ: 2.12.2013ರಲ್ಲಿ ದಾಖಲಿಸಲಾಗಿದೆ ಎಂದು ಗಮನಕ್ಕೆ ತಂದುಕೊಳ್ಳಲಾಗಿತ್ತು. ಅದೇ ದಿನದಂದು

5. ಕ್ರಿಮಿನಲ್ ಎಂ.ಸಿ. ಸಂಖ್ಯೆ 7331/2015

ಮಾನ್ಯ ವಿಶೇಷ ನ್ಯಾಯಾಧೀಶರು ದೂರನ್ನು ತನಿಖೆ ಮಾಡುವುದಕ್ಕಾಗಿ ಪೊಲೀಸ್ ಅಧೀಕ್ಷಕರಿಗೆ ಉಲ್ಲೇಖಿಸಿರುವರು. ಸಂಕ್ಷಿಪ್ತ ಆದೇಶವು ಈ ಕೆಳಗಿನಂತಿದೆ:

> "ದೂರುದಾರರು ದಿನಾಂಕ: 2.12.2013ರಂದು ದೂರನ್ನು ನೀಡಿರುವರು. ಅದರಂತೆ ದೂರನ್ನು ಅವಲೋಕಿಸಲಾಗಿದೆ. ಪಿ.ಸಿ.ಆರ್. ನಂತೆ ದೂರನ್ನು ನೋಂದಾಯಿಸಲಾಗಿದೆ. ದೂರನ್ನು ಪೊಲೀಸು ಅಧೀಕ್ಷಕರು ಲೋಕಾಯುಕ್ತ ದಾವಣಗೆರೆಗೆ ದಂಡ ಪ್ರಕ್ರಿಯಾ ಸಂಹಿತೆ 156(3)ನೇ ಪ್ರಕರಣದ ಅಡಿಯಲ್ಲಿ ತನಿಖೆ ಮಾಡುವುದಕ್ಕಾಗಿ ಉಲ್ಲೇಖಿಸಲಾಗಿದೆ.
>
> ದಿನಾಂಕ 29.3.2014 ರಂದು ವರದಿಯನ್ನು ನಿರೀಕ್ಷಿಸಲಾಗಿದೆ.
> ಸಹಿ –––––– 2.12.2013
>
> ನ್ಯಾಯಾಧೀಶ, ವಿಶೇಷ ನ್ಯಾಯಾಲಯ,
> ದಾವಣಗೆರೆ.

16. ಸಂಗತಿಯ ಮೇಲೆ ಮೇಲಿನ ಆದೇಶವು ನಿಯತವಾಗಿ ಮತ್ತು ಸಾಂದರ್ಭಿಕ ರೀತಿಯಲ್ಲಿಯೇ ಅದು ದೂರನ್ನು ದಂಡ ಪ್ರಕ್ರಿಯಾ ಸಂಹಿತೆಯ 156(3)ನೇ ಪ್ರಕರಣದ ಅಡಿಯಲ್ಲಿ ವಿಚಾರಣೆ ಮಾಡುವುದಕ್ಕಾಗಿ ವಿಶೇಷ ನ್ಯಾಯಾಲಯವು ಉಲ್ಲೇಖಿಸುತ್ತದೆ. ಈ ಸಂದರ್ಭದಲ್ಲಿ ದಂಡ ಪ್ರಕ್ರಿಯಾ ಸಂಹಿತೆ 156(3)ನೇ ಪ್ರಕರಣದ ಅಡಿಯಲ್ಲಿ ಅಧಿಕಾರವನ್ನು ಚಲಾಯಿಸುವ ಸಂಬಂಧದಲ್ಲಿ ಘನ ಭಾರತದ ಸರ್ವೋಚ್ಚ ನ್ಯಾಯಾಲಯವು ಸಮುಚಿತವಾದ ಕಾನೂನನ್ನು ಸ್ಪಷ್ಟವಾಗಿ ನಿರೂಪಿಸಿದೆ. ಘನ ಸರ್ವೋಚ್ಚ ನ್ಯಾಯಾಲಯವು ***ಪ್ರಿಯಾಂಕ ಶ್ರೀ ವಾಸ್ತವ ಮತ್ತು ಮತ್ತೊಬ್ಬರು –ವಿರುದ್ಧ– ಉತ್ತರ ಪ್ರದೇಶ ರಾಜ್ಯ ಮತ್ತು ಇತರರು*** (ಮೇಲಿನ) ಮೊಕದ್ದಮೆಯಲ್ಲಿ ಈ ವಿಷಯವನ್ನು ಪರಿಗಣಿಸಿರುವುದು ಕಂಡು ಬರುತ್ತದೆ. ಇದರಲ್ಲಿ ಘನ ಸರ್ವೋಚ್ಚ ನ್ಯಾಯಾಲಯ ವಿವಿಧ ತೀರ್ಪುಜನ್ಯ ಕಾನೂನುಗಳ ವಿಷಯಗಳಿಗೊಳಪಟ್ಟು ದಂಡ

ಪ್ರಕ್ರಿಯಾ ಸಂಹಿತೆಯ 156(3) ಪ್ರಕರಣದ ಅಡಿಯಲ್ಲಿ ಲಭ್ಯ ಪರಿಹಾರೋಪಾಯಗಳನ್ನು ನಿಯತ ಸ್ವರೂಪದಲ್ಲಿ ತೀರ್ಮಾನಿಸಬಾರದು ಎಂದು ನಿರೂಪಿಸಿದೆ. ಅದು ನ್ಯಾಯಿಕ ಸ್ಥಿತಿಯನ್ನು ಅಗತ್ಯಪಡಿಸಿದ ಅರ್ಜಿಯ ಅಡಿಯಲ್ಲಿ ಅಧಿಕಾರ ಚಲಾಯಿಸುವಂತೆ ನಿರೂಪಿಸಿದೆ. ಅರ್ಜಿಯಲ್ಲಿ ಮಾಡಿದ ಆಪಾದನೆಗಳ ಸ್ವರೂಪಕ್ಕೆ ಸಂಬಂದಿಸಿದಂತೆ ಜಾಗೃತವಾಗಿ ಸದರಿ ಅಧಿಕಾರವನ್ನು ಮ್ಯಾಜಿಸ್ಟ್ರೇಟರು ಚಲಾಯಿಸಬೇಕು ಮತ್ತು ಸೂಕ್ತ ಅರ್ಜಿಯ ಸ್ಥಿತಿಯ ಹೊರತುಪಡಿಸಿ ನಿರ್ದೇಶನಗಳನ್ನು ಕೊಡಬಾರದು ಎಂದು ಸ್ಪಷ್ಟವಾಗಿ ಹೇಳಿದೆ. ಅದು ದಂಡ ಪ್ರಕ್ರಿಯಾ ಸಂಹಿತೆಯ 156(3) ಪ್ರಕರಣದ ಅಡಿಯಲ್ಲಿ ಸ್ವತಃ ತಾನು ಇತರರ ಕಿರುಕುಳಕ್ಕೆ ಒಳಗಾಗಿ ಪ್ರತಿವಾದಿಯಾಗಿ ಪ್ರಾರ್ಥಿಸುವುದಕ್ಕೆ ಅಧಿಕಾರ ಹೊಂದಿಲ್ಲದಿರುವುದನ್ನು ಸಹ ಅಭಿವ್ಯಕ್ತಿಸಿದೆ. ನ್ಯಾಯಾಲಯವನ್ನು ನಿಜವಾದ ಬಾಧಿತ ವ್ಯಕ್ತಿಗಳು ನಿಷ್ಕಪಟವಾಗಿ ನಿಯಮದ ಮೂಲಕ ಮಾತ್ರವೇ ಪ್ರಾರ್ಥಿಸಬೇಕಾಗಿದೆ. ಮುಂದುವರೆದು, ಅದು ದಂಡ ಪ್ರಕ್ರಿಯಾ ಸಂಹಿತೆಯ 156(3)ನೇ ಪ್ರಕರಣದ ಅಡಿಯಲ್ಲಿ ನ್ಯಾಯಕ್ಕೆ ಅನುಕೂಲಕರವಾಗಿ ಆದೇಶವನ್ನು ಹೊರಡಿಸಬಹುದಾಗಿದೆ ಎಂದು ಸಹ ನಿರೂಪಿಸಿದೆ. ಸದರಿ ನಿರ್ಣಯದಲ್ಲಿ, ಘನ ಸರ್ವೋಚ್ಚ ನ್ಯಾಯಾಲಯ, ಕೆಲವು ವ್ಯಕ್ತಿಗಳ ಕಿರುಕುಳಕ್ಕೆ ಮಾತ್ರವೇ ಯಾವುದೇ ಹೊಣೆಗಾರಿಕೆಯ ಹೊರತಾಗಿ ನಿಯತ ಮತ್ತು ಸಾಂದರ್ಭಿಕ ರೀತಿಯಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ 156(3) ಪ್ರಕರಣದ ಅಡಿಯಲ್ಲಿ ಸಲ್ಲಿಸುವ ಅರ್ಜಿಗಳ ಪದ್ಧತಿಯನ್ನು ನಿರ್ಬಂಧಿಸುವ ಸಲುವಾಗಿ ಅಫಿಡಾವಿಟ್‌ನ್ನು ದಾಖಲಿಸಬೇಕೆಂದು ಸಹ ನಿರ್ಣಯದಲ್ಲಿ ನಿರೂಪಿಸಿದೆ.

17. ಮೇಲಿನ ಮೊಕದ್ದಮೆಯಲ್ಲಿ ಯುಕ್ತವಾದ ಟಿಪ್ಪಣಿಯನ್ನು ಸಹ ನಿರೂಪಿಸಿದೆ. ಘನ ಸರ್ವೋಚ್ಚ ನ್ಯಾಯಾಲಯ ***ಅನಿಲ್ ಕುಮಾರ್ –ವಿರುದ್ಧ– ಎಂ.ಕೆ. ಅಯ್ಯಪ್ಪ*** (ಮೇಲಿನ) ಮೊಕದ್ದಮೆಯಲ್ಲಿ ನೀಡಲಾದ ನಿರ್ಣಯವನ್ನು ಉಲ್ಲೇಖಿಸಿದೆ ಮತ್ತು ಮ್ಯಾಜಿಸ್ಟ್ರೇಟರು ಇಲ್ಲಿ ಅನ್ವಯಿಸಿಕೊಂಡಿರುವ ಮನಸ್ಥಿತಿಯೂ ಸಹಾ ಅರ್ಜಿಯ ವಸ್ತುಸ್ಥಿತಿಯೂ ಆದೇಶದಲ್ಲಿ ಪ್ರತಿಬಿಂಬಿತವಾಗತಕ್ಕದ್ದು ಎಂದು ಒತ್ತಿ ಹೇಳಿದೆ.

ಮ್ಯಾಜಿಸ್ಟ್ರೇಟರು ದೂರನ್ನು, ದಸ್ತಾವೇಜುಗಳನ್ನು ಮತ್ತು ದೂರಿನ ಸುನಾವಣೆ ಮಾಡುವ ಮುಖಾಂತರ, ದೂರುದಾರನನ್ನು ಆಲಿಸಿರುವುದನ್ನಷ್ಟೇ ಆದೇಶದ ಅಭಿವ್ಯಕ್ತಿಯಲ್ಲಿ ಪ್ರತಿಬಿಂಬಿಸಿದರಷ್ಟೆ ಸಾಲದು.

18. ಪ್ರಸ್ತುತ ಮೊಕದ್ದಮೆಯ ಮಾನ್ಯ ಮ್ಯಾಜಿಸ್ಟ್ರೇಟರು ದೂರಿನಲ್ಲಿ ಮಾಡಲಾದ ಆರೋಪಗಳಿಗೆ ಅನ್ವಯವಾಗುವ ವಸ್ತುಸ್ಥಿತಿಯನ್ನು ಅಥವಾ ಮ್ಯಾಜಿಸ್ಟ್ರೇಟರು ದೂರಿನೊಂದಿಗೆ ಹಾಜರುಪಡಿಸಲಾದ ಯಾವುದೇ ದಸ್ತಾವೇಜನ್ನು ಗಮನಕ್ಕೆ ತಂದುಕೊಂಡಿರುವುದನ್ನು ದಾಖಲಿಸದೇ 156 (3)ನೇ ಪ್ರಕರಣದ ಅಡಿಯಲ್ಲಿ ಪೊಲೀಸ್ ಅಧೀಕ್ಷಕರು ಲೋಕಾಯುಕ್ತಕ್ಕೆ ದೂರನ್ನು ಉಲ್ಲೇಖಿಸಿ ಆದೇಶಿಸಿರುತ್ತಾರೆ. ಸರ್ಕಾರೇತರ ನೌಕರರಂತೆಯೇ ಸರ್ಕಾರಿ ನೌಕರರ ವಿರುದ್ಧ ದೂರನ್ನು ದಾಖಲಿಸಿರುವ ಸಂಗತಿಯಲ್ಲಿ ಇದು ಸ್ಪಷ್ಟವಾಗುತ್ತದೆ. ವಶಪಡಿಸಿಕೊಂಡ ಭಾರೀ ಸಂಖ್ಯೆಯ ಸ್ವತ್ತುಗಳಿಗೆ ಸಂಬಂಧಿಸಿದಂತೆ ಅದರಲ್ಲಿ ಮಾಡಲಾದ ಮುಖ್ಯ ಆಪಾದನೆಗಳೆಲ್ಲವು ಮತ್ತು ದೂರಿನಲ್ಲೂ ಸಹ ಅದೇ ಆಪಾದನೆಗಳನ್ನು ಮಾಡಲಾಗಿದೆ. ಅದರಲ್ಲೂ ದೂರಿನಲ್ಲಿ, 1ನೇ ಸಂಖ್ಯೆ ಆಪಾದಿತ ಮತ್ತು 9ನೇ ಸಂಖ್ಯೆಯ ಆಪಾದಿತನು ಸ್ನೇಹಿತರಾಗಿರುವರು ಇವರು ಅಕ್ರಮವಾಗಿ ಹಲವು ಸ್ವತ್ತುಗಳನ್ನು ಖರೀದಿಸಿರುವರು ಮತ್ತು 1ನೇ ಸಂಖ್ಯೆ 9ನೇ ಸಂಖ್ಯೆಯ ಆಪಾದಿತನು ಸರ್ಕಾರಿ ನೌಕರನಾಗಿದ್ದ ತನ್ನ ಪದವನ್ನು ದುರುಪಯೋಗಪಡಿಸಿಕೊಂಡು, ಕಪ್ಪು ಹಣದ ಬಲದಿಂದ 2 ರಿಂದ 8ನೇ ಸಂಖ್ಯೆಯ ಆಪಾದಿತರುಗಳ ಹೆಸರಿನಲ್ಲಿ ಈ ಎಲ್ಲ ಭೂಮಿಗಳನ್ನು ಖರೀದಿಸಿರುತ್ತಾರೆ ಎಂದು ದೂರಿನಲ್ಲಿ ಹೇಳಲಾಗಿದೆಯೇ ಹೊರತು ಆ ಸಂಬಂಧದಲ್ಲಿ ದೂರಿನಲ್ಲಿ ಖರೀದಿಸಿದ ಭೂಮಿಗಳ ಯಾವುದೇ ಒಂದು ಕ್ರಯಪತ್ರದ ಅಥವಾ ಉದ್ಧೃತ ಆರ್‌ಟಿಸಿಯ ದಸ್ತಾವೇಜುಗಳನ್ನು ದೂರಿನ ಅರ್ಜಿಯೊಂದಿಗೆ ಹಾಜರುಪಡಿಸಿರುವುದಿಲ್ಲ. ಈ ಎಲ್ಲ ಸ್ವತ್ತುಗಳು ಅರ್ಜಿದಾರರ ಹೆಸರಿನಲ್ಲಿದೆ ಎಂಬುದನ್ನು ಸ್ಪಷ್ಟ ಪಡಿಸುವಂತಹ ಯಾವುದೇ ದಸ್ತಾವೇಜುಗಳನ್ನು ಅರ್ಜಿಯೊಂದಿಗೆ ಲಗತ್ತಿಸಿಲ್ಲದಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

19. ಈ ಖಾಸಗಿ ದೂರಿನಲ್ಲಿ ನಿರ್ದಿಷ್ಟವಾಗಿ 1 ರಿಂದ 9ರ ಸಂಖ್ಯೆಯ ಆಪಾದಿತರು ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ 8 ಮತ್ತು 9ನೇ ಪ್ರಕರಣದ ಅಡಿಯಲ್ಲಿ ಮತ್ತು ಭಾರತ ದಂಡ ಸಂಹಿತೆಯ 34, 143, 504 ಮತ್ತು 506ನೇ ಪ್ರಕರಣದ ಅಡಿಯಲ್ಲೂ ಸಹ ದಂಡನೀಯ ಅಪರಾಧವನ್ನು ಎಸಗಿರುವರೆಂದು ನಿರೂಪಿಸಿ ಕ್ರಮ ತೆಗೆದುಕೊಳ್ಳಲು ನಿವೇದಿಸಿರುವರು. ದೂರಿನಲ್ಲಿ ಉಲ್ಲಂಘಿಸಿದ ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ 8 ಮತ್ತು 9ನೇ ಪ್ರಕರಣದಲ್ಲಿರುವ ಅಂಶಗಳಾವುವು ಈ ದೂರಿಗೆ ಅತ್ಯಲ್ಪವಾಗಿಯೂ ಅನ್ವಯವಾಗುವುದಿಲ್ಲ. ಮತ್ತೊಂದು ಕಡೆಯಲ್ಲಿ, ಈಗಾಗಲೇ ಮೇಲೆ ನಿರೂಪಿಸಿರುವಂತೆ, ಆಪಾದಿತ ವಿವಿಧ ಸ್ವತ್ತುಗಳ ಸ್ವಾಧೀನಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದ ಎಲ್ಲಾ ಆಪಾದನೆಗಳೂ ಕಪ್ಪು ಹಣದ ಬಲದಿಂದ ಅಕ್ರಮವಾಗಿ ಸ್ವಾಧೀನತೆ ಹೊಂದಿರುವ ಸ್ವತ್ತುಗಳಾಗಿವೆ ಎಂದಿದ್ದಾರೆ. ಈ ಆಪಾದನೆಗಳೆಲ್ಲವೂ ಸತ್ಯವೆಂದು ಕಂಡುಬಂದರೆ, ಈ ಆಪದನೆಗಳಿಗೆ ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ 13(1)(ಇ) ಪ್ರಕರಣದ ಅಡಿಯಲ್ಲಿ ಅನ್ವಯವಾಗುತ್ತವೆಯೇ ಹೊರತು ಈ ಆಪಾದನೆಗಳಿಗೆ ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ 8 ಮತ್ತು 9ನೇ ಪ್ರಕರಣಗಳು ಅನ್ವಯವಾಗುವುದಿಲ್ಲ. ನಿಸ್ಸಂಶಯವಾಗಿ, ದೂರುದಾರರು ದೂರಿನಲ್ಲಿ ಕಾನೂನಿನ ಉಪಬಂಧವನ್ನು ಉಲ್ಲೇಖಿಸುವ ಅಗತ್ಯವಿರುವುದಿಲ್ಲ ಮತ್ತು ತಪ್ಪಾದ ಕಾನೂನು ಉಪಬಂಧವನ್ನು ದೂರಿನಲ್ಲಿ ಉಲ್ಲೇಖಿಸಿರುವುದರಿಂದ ದೂರು ನ್ಯೂನತೆಯಿಂದ ಕೂಡಿದೆ. ಈ ರೀತಿಯ ಉಲ್ಲೇಖಗಳ ಮೂಲಕ ದೂರನ್ನು ಸಲ್ಲಿಸಬಾರದಾಗಿತ್ತು. ಆದರೆ ಪ್ರಸ್ತುತ ಮೊಕದ್ದಮೆಯಲ್ಲಿ, ದೂರುದಾರನು ದೂರಿನಲ್ಲಿ ವಕೀಲರ ನೆರವನ್ನು ಪಡೆದುಕೊಂಡಿರುವುದನ್ನು ಪ್ರಕಟಪಡಿಸಿರುತ್ತಾನೆ ಮತ್ತು ಅವನ ವಕೀಲರಾದ ಶ್ರೀ ಡಿ.ವೈ. ಹಾದಿಮನಿ ಹೇಳಿರುವ ವ್ಯವಹರಣೆಗಳ ನೋಟೀಸಿನಲ್ಲಿ ಅದನ್ನು ನಿರ್ದಿಷ್ಟವಾಗಿ ನಿರೂಪಿಸಲಾಗಿದೆ. ನೋಟೀಸಿನಲ್ಲಿ ದೂರುದಾರನು ಕಾನೂನು ಸಲಹೆಯ ಅನುಕೂಲತೆಯನ್ನು ಪಡೆದುಕೊಂಡಿರುವುದು ಕಂಡುಬರುತ್ತದೆ. ಆದುದರಿಂದ, ದೂರಿನಲ್ಲಿ ತಪ್ಪಾದ ಉಪಬಂಧವನ್ನು ಉಲ್ಲೇಖಿಸಲಾಗಿದೆ ಎಂದು ಅನುಮಾನ ವ್ಯಕ್ತವಾಗಿದೆ ಇದು ನ್ಯಾಯಾಲಯವನ್ನು ತಪ್ಪುದಾರಿಗೆ ಮತ್ತು ತಪ್ಪಾದ ನಿರ್ದೇಶನಕ್ಕೆ ಎಳೆಯಲಾಗಿದೆ ಎಂದು ಪರ್ಯಾಲೋಚಿಸಬಹುದಾಗಿದೆ. ವಿಶೇಷ ನ್ಯಾಯಾಲಯ ಈ ದೂರನ್ನು

ವಿವೇಚಿಸದೆ ಸುಮ್ಮನೆ ಕಣ್ಣುಮುಚ್ಚಿ ಸ್ವೀಕರಿಸಿದೆ ಮತ್ತು ದೂರಿನಲ್ಲಿ ಉಲ್ಲೇಖಿಸಿದ ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ 8 ಮತ್ತು 9ನೇ ಪ್ರಕರಣದ ಅಡಿಯಲ್ಲಿ ಅಂಥ ಯಾವುದೇ ಅಪರಾಧಗಳು ಪರಿಗಣಿಸಬೇಕೇ ಎಂಬುದನ್ನು ಸ್ವತಃ ತಾನೇ ಮನವರಿಕೆ ಮಾಡಿಕೊಳ್ಳದೆ, ಅದು ಮೊಕದ್ದಮೆಯನ್ನು ಲೋಕಾಯುಕ್ತ ಪೊಲೀಸರಿಗೆ ಉಲ್ಲೇಖಿಸುತ್ತದೆ ಇಲ್ಲಿ ನ್ಯಾಯಾಲಯವು ಪರಿಸ್ಥಿತಿಯನ್ನು ತಪ್ಪಾಗಿ ಅರ್ಥೈಸಿಕೊಂಡಿರುವುದು ಸ್ಪಷ್ಟವಾಗಿದೆ.

20. ಎರಡನೇಯದಾಗಿ, ದೂರಿನಲ್ಲಿ 2013ರ ನವೆಂಬರ್ ಮೊದಲ ವಾರದಲ್ಲಿ ಮಾಡಿದ ಆಪಾದನೆಗಳಾಗಿವೆ. ದೂರುದಾರನ ಬಟ್ಟೆ ಅಂಗಡಿಯ ಹತ್ತಿರ ಬಂದ 1, 5 ಮತ್ತು 9ನೇ ಸಂಖ್ಯೆಯ ಆಪಾದಿತರು ದೂರುದಾರನನ್ನು ನಿಂದಿಸಿ, ಅವನಿಗೆ ಜೀವ ಬೆದರಿಕೆ ಹಾಕಿರುವುದನ್ನು ದೂರಿನಲ್ಲಿ ಆಪಾದಿಸಲಾಗಿದೆ. ಈ ಆಪಾದನೆಗಳು 1, 5 ಮತ್ತು 9ನೇ ಆರೋಪಿಗಳಿಗೆ ಮಾತ್ರ ಸಂಬಂಧಿಸಿದಾಗಿದೆ ಮತ್ತು ಈ ಆಪಾದಗಳಾವುವು ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ ವ್ಯಾಪ್ತಿಯೊಳಗೆ ಬರುವುದಿಲ್ಲ ಮತ್ತು ಅದನ್ನು ಪ್ರತ್ಯರ್ಜಿದಾರ ಸಂಖ್ಯೆ 2 ಇವರು ತನಿಖೆ ಮಾಡಲು ಬರುವುದಿಲ್ಲ. ಆದರೆ ಆಶ್ಚರ್ಯಕರವಾಗಿ, ಪ್ರತ್ಯರ್ಜಿದಾರ ಸಂಖ್ಯೆ.2 ಅವರು ಈ ಎಲ್ಲಾ ಆಪಾದನೆಗಳ ವಿರುದ್ಧ 1 ರಿಂದ 9ನೇ ಸಂಖ್ಯೆಯ ಎಲ್ಲಾ ಆಪಾದಿತರ ಮೇಲೆ ಭಾರತ ದಂಡ ಸಂಹಿತೆಯ 34, 143, 504 ಮತ್ತು 506ನೇ ಪ್ರಕರಣದ ಅಡಿಯಲ್ಲಿ ಎಫ್‌ಐಆರ್ ಅನ್ನು ದಾಖಲಿಸಿರುತ್ತಾರೆ.

21. ಇದು ಹೇಗೆ ಇರಲಿ, ಪ್ರತ್ಯರ್ಜಿದಾರರು ಸಂಖ್ಯೆ.2 ಇವರು ದೂರಿನ ವಿವಾದಾಂಶವನ್ನು ಯುಕ್ತವಾಗಿ ಪರಿಶೀಲಿಸಿರುವುದಿಲ್ಲ ಅಥವಾ ದೂರಿನಲ್ಲಿ ಆಪಾದಿಸಲಾದ ಅಪರಾಧಗಳನ್ನು ಎಸಗಿರುವ ಬಗೆಯನ್ನು ಸ್ವತಃ ಮನವರಿಕೆ ಮಾಡಿಕೊಳ್ಳದೇ ಎಫ್‌ಐಆರ್ ಅನ್ನು ದಾಖಲಿಸಿರುವರು. ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ 8 ಮತ್ತು 9ನೇ ಪ್ರಕರಣದ ಅಡಿಯಲ್ಲಿ ಮತ್ತು ಭಾರತ ದಂಡ ಸಂಹಿತೆಯ 34 ಮತ್ತು 198ನೇ ಪ್ರಕರಣವನ್ನು ಓದಿಕೊಳ್ಳುವುದರೊಂದಿಗೆ ಎಫ್‌ಐಆರ್ ಅನ್ನು ನೋಂದಾಯಿಸಿರುವರು. ಆದರೆ ಸದರಿ ಉಪಬಂಧಗಳ ವ್ಯಾಪ್ತಿಗೆ ದೂರಿನಲ್ಲಿ

ಮಾಡಲಾದ ಆಪಾದನೆಗಳು ಒಳಪಡುವುದಿಲ್ಲ. ಮತ್ತೊಂದು ಕಡೆಯಲ್ಲಿ, ದೂರಿನಲ್ಲಿ ಮಾಡಲಾದ ಆಪಾದನೆಗಳು ಅದರಲ್ಲಿ ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ 13(1)(ಇ) ಪ್ರಕರಣದ ವ್ಯಾಪ್ತಿಯೊಳಗೆ ಅಕ್ರಮ ಸಂಪತ್ತಿನ ಸಂಪಾದನೆಯ ಮತ್ತು ಅರ್ಜಿದಾರರ ಹೆಸರಿನಲ್ಲಿ ಸ್ವಾಧೀನ ಹೊಂದಿರುವ ಸ್ಥಿರಾಸ್ತಿಗಳು ಒಳಪಡುತ್ತವೆ. ವಿಷಾದನೀಯ ಅಂಶವೆಂದರೆ ಎಫ್‌ಐಆರ್ ಅನ್ನು ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮ 13(1)(ಇ) ಪ್ರಕರಣದ ಅಡಿಯಲ್ಲಿ ನೋಂದಾಯಿಸಿಲ್ಲದಿರುವುದು.

22. 1ನೇ ಪ್ರತ್ಯರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ವಿಚಾರಣೆಯ ಕಾಲಾವಧಿಯಲ್ಲಿ, ಅರ್ಜಿದಾರರ ಕಚೇರಿ ಮತ್ತು ಮನೆಯ ಆವರಣಗಳಲ್ಲಿ ನಡೆಸಲಾದ ಶೋಧನೆಯ ಕಾಲಾವಧಿಯಲ್ಲಿ ವಶಪಡಿಸಿಕೊಂಡ ಎಲ್ಲ ದಸ್ತಾವೇಜುಗಳನ್ನು ನ್ಯಾಯಾಲಯಕ್ಕೆ ನಿವೇದಿಸಿರುವರು ಮತ್ತು ದೂರಿನಲ್ಲಿ ಮಾಡಲಾದ ಆಪಾದನೆಗಳ ರುಜುವಾತಿಗಾಗಿ ಎರಡನೇ ಪ್ರತ್ಯರ್ಜಿದಾರರು ಸಂಗ್ರಹಿಸಲಾದ ಆರೋಪಕ್ಕೊಳಪಟ್ಟ ಸಾಕ್ಷ್ಯಗಳನ್ನು ಮಂಡಿಸಿರುವರು. ಈ ಹಂತದಲ್ಲಿಯೇ ಕೂತೂಹಲಕಾರಿಯಾಗಿರುವಂತೆ, ಮುಟ್ಟುಗೋಲು ಮಹಜರನ್ನು, ಶೋಧನ ವಾರಂಟು ಮುಂತಾದವುಗಳಂತಹ ವಿಚಾರಣೆಯ ದಸ್ತಾವೇಜುಗಳ ಪ್ರತಿಯನ್ನು 1ನೇ ಪ್ರತ್ಯರ್ಜಿದಾರರು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ ಮತ್ತು 2ನೇ ಪ್ರತ್ಯರ್ಜಿದಾರರು ಅಂತಹ ಯಾವುದೇ ದಸ್ತಾವೇಜುಗಳನ್ನು ಹಾಜರುಪಡಿಸಿರುವುದಿಲ್ಲ. ಈ ಎಲ್ಲ ದಸ್ತಾವೇಜುಗಳ ಪ್ರಮಾಣಿತ ಪ್ರತಿಯನ್ನು ನ್ಯಾಯಾಲಯದಿಂದ ನೀಡಲಾಗಿದೆ. ನಿರ್ವಿವಾದವಾಗಿ ಈ ವಸ್ತುವಿಷಯ ವಿಚಾರಣೆಯಾಗುತ್ತಿರುತ್ತದೆ. ಈ ಕಾರಣದಿಂದ ಮಾನ್ಯ ವಿಶೇಷ ನ್ಯಾಯಾಧೀಶರು ವಿಚಾರಣೆಯ ಇತ್ಯರ್ಥದ ಅವಧಿಯಲ್ಲಿ ಮೂರನೇ ಪಕ್ಷಕಾರರಿಗೆ ಮೊಕದ್ದಮೆಯ ದಿನಚರಿಯ ಪ್ರಮಾಣಿತ ಪ್ರತಿಗಳನ್ನು ನೀಡುವಂತಿರುವುದಿಲ್ಲ. ಅದರಂತೆ ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ 13(1)(ಇ) ಪ್ರಕರಣದಂತೆ ಯಾವುದೇ ಹಣದ ಸಂಪನ್ಮೂಲ ಅಥವಾ ಸ್ವತ್ತುಗಳ ಸ್ವಾಧೀನವು ಸ್ವತಃ ಅದೊಂದು ಅಪರಾಧವಾಗಿರುವುದಿಲ್ಲ. ಆದರೆ ಅಪರಾಧವನ್ನು ಸುಸ್ಥಾಪಿಸುವುದಕ್ಕೆ ಅಂಥ ಸ್ವಾಧೀನವನ್ನು ಮನವರಿಕೆ ಮಾಡಿಕೊಡುವಲ್ಲಿ ಅದು ವಿಫಲವಾಗಿರುತ್ತದೆ. ಕಾನೂನು

ಸ್ಥಿತಿಯು ಹೀಗಿರುವಾಗ, ವಿಚಾರಣೆಯ ಅವಧಿಯಲ್ಲಿ ಸಂಗ್ರಹಿಸಲಾದ ವಸ್ತುವಿಷಯದ ಸಂಬಂಧದಲ್ಲಿ ವಿಚಾರಣಾಧಿಕಾರಿಯು ಈಗಾಗಲೇ ಮಾಡಲಾದ ಶೋಧನೆಗಳ ದಸ್ತಾವೇಜು ಪ್ರತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಹಾಜರುಪಡಿಸದಿರಲು ಕಾರಣವೇನೆಂದರೆ 9ನೇ ಅಪಾದಿತನು ಸದರಿ ಸ್ವಾಧೀನಗಳಿಗೆ ಅನುಸಾರವಾಗಿ ಮನದಟ್ಟು ಮಾಡಿಕೊಡುವುದಕ್ಕೆ ಅವನಿಗೆ ಒಂದು ಅವಕಾಶ ನೀಡುವವರೆಗೂ ಈ ಯಾವುವೇ ದಸ್ತಾವೇಜುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಸಾಧ್ಯವಾಗುವುದಿಲ್ಲ ಎಂದು ನಿರೂಪಿಸಲಾಗಿದೆ. ಹಾಗಾಗಿ, 1ನೇ ಪ್ರತ್ಯರ್ಜಿದಾರನು ವಿಚಾರಣೆಯ ಪ್ರಮಾಣಿತ ಪ್ರತಿಗಳನ್ನು ಹಾಜರುಪಡಿಸಿದ್ದಾಗ್ಯೂ 13(1)(ಇ) ಪ್ರಕರಣದ ಉಪಬಂಧಗಳ ನಿರೂಪಣೆಯಲ್ಲಿ, ವಿಚಾರಣೆಯ ಪ್ರಮಾಣೀತ ಪ್ರತಿ ದಸ್ತಾವೇಜುಗಳು 9ನೇ ಆಪಾದಿತನ ಹೆಸರಿನಲ್ಲಿರುವ ಭಾರೀ ಸಂಖ್ಯೆಯ ವಿವರಿಸಲಾಗದ ಆಸ್ತಿಗಳನ್ನು ಬೆಳಕಿಗೆ ತರುವ ಸಂಬಂಧದಲ್ಲಿ ನಡೆಯುತ್ತಿರುವ ವಿಚಾರಣೆಯೂ ಇನ್ನೂ ವಿಚಾರಣೆಯ ಹಂತದಲ್ಲಿರುವಾಗ 1ನೇ ಪ್ರತ್ಯರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಅರ್ಜಿದಾರರ ವಿರುದ್ಧ ಮತ್ತು ಇತರ ಅರ್ಜಿದಾರರ ವಿರುದ್ಧ ವಿಚಾರಣಾ ದಸ್ತಾವೇಜುಗಳನ್ನು ಸಲ್ಲಿಸಿರುವುದರಿಂದ ಈ ದಸ್ತಾವೇಜುಗಳಿಂದ ನಿರ್ಣಯಗಳನ್ನು ನೀಡಲು ಬರುವುದಿಲ್ಲ.

23. ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ 13(1) (ಇ)ಯ ಪ್ರಕರಣದ ಅಡಿಯಲ್ಲಿ ಎಸಗಲಾಗಿರುವ ಆಪಾದನೆಯ ಆರೋಪಗಳಿಗಾಗಿ ಮೊಕದ್ದಮೆಯನ್ನು ಆ ಪ್ರಕರಣದ ಗೈರು ಹಾಜರಿಯಲ್ಲಿ ನೋಂದಾಯಿಸಿಕೊಂಡು ಹೇಗೆ ಶೋಧನೆಗಳನ್ನು ಮಾಡುತ್ತಿರುವುದನ್ನು ಸಹ ತಿಳಿದುಕೊಳ್ಳಲು ಸಾಧ್ಯವಾಗಿಲ್ಲ. ಈ ಸಂದರ್ಭದಲ್ಲಿ, ಇದಕ್ಕೆ ಅವಲಂಬಿತವಾಗಿ ಕಂಡುಬಂದಿರುವ ಘನ ಭಾರತದ ಸರ್ವೋಚ್ಚ ನ್ಯಾಯಾಲಯದ ಸಂವಿಧಾನ ಪೀಠವು ***ಲಲಿತ ಕುಮಾರಿ –ವಿರುದ್ಧ– ಉತ್ತರ ಪ್ರದೇಶ ರಾಜ್ಯ***[6] ಮೊಕದ್ದಮೆಯ ಸಂಬಂಧದಲ್ಲಿ ನೀಡಿದ ತೀರ್ಪಿನಲ್ಲಿ ಎರಡೂ ಪ್ರಶ್ನೆಗಳಿಗೆ ನೀಡಲಾದ ಉತ್ತರವು ಹೀಗಿದೆ:

6. (2014) 2 ಎಸ್‌ಸಿಸಿ 1

*"(i) ಬಾಧಿತ/ದೂರುದಾರರು ದೂರಿನಲ್ಲಿ ಮಾಡಿದ ಆಪಾದನೆಗಳ ಮೇಲೆ ಆ ಕೂಡಲೇ ವಿಚಾರಣೆ ಮಾಡುವಂತಹ ಆ ಯಾವುದೇ ಹಕ್ಕುಗಳಿಗೆ ಪರಿಣಾಮಕಾರಿಯಾಗುವಂತೆ ಪೊಲೀಸರು ಕೈಚಳಕ ತೋರುವ ರೀತಿಯಲ್ಲಿ ಆ ಕೂಡಲೇ ಎಫ್‌ಐಆರ್ ಅನ್ನು ದಾಖಲಿಸದಿರುವ ಸಂದರ್ಭ; ಮತ್ತು*

*(ii) ಸಂಜ್ಞೇಯ ಅಪರಾಧವನ್ನು ಎಸಗಿರುವುದನ್ನು ಸ್ಪಷ್ಟವಾಗಿ ಬಹಿರಂಗಪಡಿಸದಿರುವ ದೂರು/ಮಾಹಿತಿ ಇದ್ದ ಸಂದರ್ಭದಲ್ಲಿ ಆದರೆ ಎಫ್‌ಐಆರ್ ಅನ್ನು ಕಡ್ಡಾಯವಾಗಿ ನೋಂದಾಯಿಸಿದ ಪರಿಣಾಮವಾಗಿ ಅಪಾದಿತನ ಹಕ್ಕುಗಳನ್ನು ಅದು ಅತಿಲಂಘಿಸಿರುವ ಸಂದರ್ಭವಾಗುತ್ತದೆ."*

*ಮೇಲೆ ಎತ್ತಲಾದ ಪ್ರಶ್ನೆಗಳಿಗೆ ಸಂವಿಧಾನ ಪೀಠವು 49,115, 120.6 ಮತ್ತು 120.7 ಪ್ಯಾರಾಗಳಲ್ಲಿ ಪರಾಮರ್ಶಿಸಿದ ಉತ್ತರಗಳು ಈ ಕೆಳಗಿನಂತಿದೆ:*

*"49. ತತ್ಪರಿಣಾಮವಾಗಿ, ಸಂಹಿತೆಯ 154ನೇ ಪ್ರಕರಣದ ಅಡಿಯಲ್ಲಿ ಎಫ್‌ಐಆರ್ ಅನ್ನು ದಾಖಲಿಸುವುದು ಅತ್ಯವಶ್ಯಕವಾಗಿರುವ ಷರತ್ತು ಮಾಹಿತಿಯಲ್ಲಿ ಇರಲೇಬೇಕು ಮತ್ತು ಆ ಮಾಹಿತಿಯು ಸಂಜ್ಞೇಯ ಅಪರಾಧವನ್ನು ಬಹಿರಂಗಗೊಳಿಸಿರಬೇಕು. ಬಹಿರಂಗಗೊಂಡ ಆ ಯಾವುದೇ ಮಾಹಿತಿ ಇದ್ದರೆ ಅದನ್ನು 154(1)ನೇ ಪ್ರಕರಣವು ಅಗತ್ಯಪಡಿಸಿದಂತೆ ಅದನ್ನು ಮನವರಿಕೆ ಮಾಡಿಕೊಡಲು ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯ ಮುಂದೆ ಅದನ್ನು ಮಂಡಿಸುವುದು. ಸದರಿ ಪೊಲೀಸ್ ಅಧಿಕಾರಿಗೆ ಬೇರಾವುದೇ ಆಯ್ಕೆಯ ಹೊರತು, ನಿಯಮಿಸಿದ ನಮೂನೆಯಲ್ಲಿ ಅದರ ವಸ್ತು ವಿಷಯವನ್ನು*

*ನಮೂದಿಸಬೇಕಾಗುತ್ತದೆ. ಅದರಂತೆಯೇ ಅಂಥ ಮಾಹಿತಿಯ ಆಧಾರದ ಮೇಲೆ ಮೊಕದ್ದಮೆಯನ್ನು ನೋಂದಾಯಿಸಿಕೊಳ್ಳತಕ್ಕದ್ದು. ಸಂಹಿತೆಯ 154ನೇ ಪ್ರಕರಣದ ಉಪಬಂಧವು ಆಜ್ಞಾಪಕವಾಗಿವೆ ಮತ್ತು ಬಹಿರಂಗಗೊಂಡ ಸಂಜ್ಞೇಯ ಅಪರಾಧದ ಮಾಹಿತಿಯ ಆಧಾರದ ಮೇಲೆ ಮೊಕದ್ದಮೆಯನ್ನು ನೋಂದಾಯಿಸುವುದಕ್ಕೆ ಸಂಬಂಧಪಟ್ಟ ಅಧಿಕಾರಿಯು ಕರ್ತವ್ಯಬದ್ಧವಾಗಿರತಕ್ಕದ್ದು. ಹಾಗಾಗಿ, ಸಂಹಿತೆಯ 154(1)ನೇ ಪ್ರಕರಣದ ಸ್ಪಷ್ಟ ಮಾತುಗಳನ್ನು, ಅದು ಹೊಂದಿರುವ ಶಾಬ್ದಿಕ ಅರ್ಥವನ್ನು ಪರಾಮರ್ಶಿಸಬೇಕಾಗುತ್ತದೆ.*

*115. ಈಗಾಗಲೇ, ನಮ್ಮ ನಿಸ್ಸಂಶಯ ಮಾತುಗಳಲ್ಲಿ, ಎಲ್ಲಿ ಸಂಜ್ಞೇಯ ಅಪರಾಧಗಳನ್ನು ಸ್ವೀಕರಿಸಿದ ಮೇಲೆ ಎಫ್ಐಆರ್ ಅನ್ನು ದಾಖಲಿಸುವುದು ಕಡ್ಡಾಯವಾಗಿದೆ ಎಂಬುದು ಸಂಹಿತೆಯ 154ನೇ ಪ್ರಕರಣದ ಮುಖ್ಯ ಉದ್ದೇಶವಾಗಿದೆ. ಅಲ್ಲದೆ, ತನಿಖೆಯೂ ಪ್ರಾಥಮಿಕ ಹಂತದಲ್ಲಿ ಇರುವಾಗಲೇ ಸ್ಥಿತ್ಯಂತರ ಕಾಲದಲ್ಲಿ ಮೂಲದ ಮತ್ತು ಅಪರಾಧದ ಹೊಸತನದ ಕಾರಣದಿಂದ ಆಗುವ ಬದಲಾವಣೆಯನ್ನು ಅದು ಅಗತ್ಯಪಡಿಸಬಹುದು. ಘಟನೆಯು ವೈದ್ಯರ ಕಡೆಯಿಂದ ಆಗಿರುವ ವೈದ್ಯಕೀಯ ನಿರ್ಲಕ್ಷತೆಗೆ ಸಂಬಂಧಿಸಿದ ಆರೋಪಗಳ ಮೊಕದ್ದಮೆಯಲ್ಲಿ ಅಂಥ ಒಂದು ಸಂದರ್ಭಕ್ಕೆ ಅದು ಪ್ರೇರಣೆಯಾಗುತ್ತದೆ. ಅದು ದೂರಿನಲ್ಲಿರುವ ಆರೋಪಗಳನ್ನು ಮಾತ್ರವೇ ಆಧಾರವಾಗಿಟ್ಟುಕೊಂಡು ವೈದ್ಯಕೀಯ ವೃತ್ತಿಯನ್ನು ವಿಚಾರಣೆಗೊಳಪಡಿಸುವುದು ನ್ಯಾಯಯುತವಾದುದಲ್ಲ ಮತ್ತು ಅಸಮಂಜಸವಾದುದು".*

ನಂತರದಲ್ಲಿ ಪರಾಮರ್ಶನಾ ಪೀಠವು ಮಂಡಿಸಿದ ಅಭಿಪ್ರಾಯೋಕ್ತಿಗಳು:

*"120.6 ಪ್ರತಿಯೊಂದು ಮೊಕದ್ದಮೆಯ ಸಂಗತಿಗಳು ಮತ್ತು ಸನ್ನಿವೇಶಗಳನ್ನು ಅವಲಂಬಿಸಿ ಯಾವ ವಿಧಾನದಲ್ಲಿ ಮತ್ತು ಯಾವ*

*ರೀತಿಯು ಪ್ರಾಥಮಿಕ ತನಿಖೆಯುನ್ನು ನಡೆಸಬೇಕಾಗುತ್ತದೆ. ಮೊಕದ್ದಮೆಯ ಪ್ರವರ್ಗಗಳನ್ನು ಈ ಕೆಳಗಿನಂತೆ ಮಾಡಲಾಗಿದೆ ಮತ್ತು ಯಾವ ರೀತಿಯಲ್ಲಿ ಪ್ರಾಥಮಿಕ ತನಿಖೆಯನ್ನು ನಡೆಸಬೇಕು ಎಂಬುದನ್ನು ಸಹ ನಿರೂಪಿಸಲಾಗಿದೆ:*

ಎ. ವೈವಾಹಿಕ ವಿವಾದಗಳು/ಕುಟುಂಬ ವಿವಾದಗಳು

ಬಿ. ವ್ಯಾಪಾರ – ವಾಣಿಜ್ಯ ಅಪರಾಧಗಳು

ಸಿ. ವೈದ್ಯಕೀಯ ನಿರ್ಲಕ್ಷತೆಯ ಮೊಕದ್ದಮೆಗಳು

ಡಿ. ಭ್ರಷ್ಟಾಚಾರ ಮೊಕದ್ದಮೆಗಳು

ಇ. ಕ್ರಿಮಿನಲ್ ವಿಚಾರಣೆಯನ್ನು ಪ್ರಾರಂಭಿಸುವಲ್ಲಿ ಅನಗತ್ಯ ವಿಳಂಬ / ಕರ್ತವ್ಯ ಲೋಪಗಳು ಆಗಿರುವ ಮೊಕದ್ದಮೆಗಳು ಉದಾಹರಣೆಯಾಗಿ 3 ತಿಂಗಳಿಗಿಂತ ಹೆಚ್ಚಿನ ವಿಳಂಬ ಆಗಿರುವುದಕ್ಕಾಗಿ ವಿಳಂಬದ ಕಾರಣಗಳನ್ನು ತೃಪ್ತಿಕರವಾಗಿ ವಿವರಿಸದ ಹೊರತು ವಸ್ತು ವಿಷಯವನ್ನು ವರದಿ ಮಾಡಿರುವ ಮೊಕದ್ದಮೆಗಳು.

ಮೇಲೆ ಹೇಳಿರುವಂಥವುಗಳು ಕೇವಲ ದೃಷ್ಟಾಂತ ಮಾತ್ರವಾಗಿದೆ ಮತ್ತು ಪ್ರಾಥಮಿಕ ವಿಚಾರಣೆ ವಾರೆಂಟಿನಲ್ಲಿರುವ ಆ ಯಾವುದೇ ಎಲ್ಲ ನಿಬಂಧನೆಗಳು ವ್ಯಾಪಕವಾಗಿ ಇರುವುದಿಲ್ಲ.

120.7 ಆಪಾದಿತರ ಮತ್ತು ದೂರುದಾರರ ಹಕ್ಕುಗಳನ್ನು ಸುನಿಶ್ಚಿತಪಡಿಸಲು ಮತ್ತು ಸಂರಕ್ಷಿಸಲು ಅವಧಿ ಬದ್ಧ ಪ್ರಾಥಮಿಕ ತನಿಖೆಯನ್ನು ಮಾಡತಕ್ಕದ್ದು ಮತ್ತು ಯಾವುದೇ ಸಂದರ್ಭದಲ್ಲೂ ಆ ಅವಧಿಯೂ 7 ದಿನಗಳನ್ನು ಮೀರಬಾರದು. ಅಂಥ ವಿಳಂಬದ ಸಂಗತಿ ಮತ್ತು ಕಾರಣಗಳು ಪ್ರತಿಬಂಧಿತವಾಗಿರುವಂತೆ ಸಾಮಾನ್ಯ ದಿನಚರಿಯಲ್ಲಿ ನಮೂದಿಸತಕ್ಕದ್ದು".

24. ಮೇಲಿನ ನಿರ್ಣಯವು, ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ 13(1)(ಇ) ಪ್ರಕರಣದ ಅಡಿಯಲ್ಲಿ ಎಸಗಿದ ಅಪರಾಧಕ್ಕೆ ಸಂಬಂಧಿಸಿದಂತೆ ಮಾಡಿದ ಆರೋಪಗಳು ಸ್ಪಷ್ಟವಾಗಿರಬೇಕೆಂದು ಸ್ಪಷ್ಟಪಡಿಸಿದೆ. ವಿಶೇಷ ನ್ಯಾಯಾಲಯ ಪ್ರಾಥಮಿಕ ತನಿಖೆಯನ್ನು ಸಮರ್ಥಿಸುವುದು ಅದಕ್ಕೆ ಅನಿವಾರ್ಯವಾಗಿದೆ ಮತ್ತು ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ 13(1) (ಇ) ಪ್ರಕರಣದ ಅಡಿಯಲ್ಲಿ ಮೊಕದ್ದಮೆಯನ್ನು ನೋಂದಾಯಿಸುವುದಕ್ಕಾಗಿ ಮೇಲ್ನೋಟದ ವಸ್ತುವಿಷಯವನ್ನು ಸುನಿಶ್ಚಿತಗೊಳಿಸುವುದಕ್ಕೆ 2ನೇ ಸಂಖ್ಯೆ ಪ್ರತ್ಯರ್ಜಿದಾರನ ಮೇಲೂ ಸಹ ಸಮಾನ ಅನಿವಾರ್ಯತೆ ಇರುತ್ತದೆ ಮತ್ತು ಅದರ ಮೇಲೆ ತನಿಖೆಯ ಕ್ರಮ ಕೈಗೊಳ್ಳುವುದು. ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಅಗತ್ಯಪಡಿಸಿಲ್ಲದಿರುವುದನ್ನು ಮಾತ್ರವಲ್ಲದೆ ಪ್ರಾಥಮಿಕ ತನಿಖೆಯನ್ನು ನಡೆಸಲು ಅಗತ್ಯಪಡಿಸುತ್ತದೆ. ಆದರೆ ಭಾರತದ ಘನ ಸರ್ವೋಚ್ಚ ನ್ಯಾಯಾಲಯವು ನೀಡಿರುವ ವಿವಿಧ ನಿರ್ಣಯವನ್ನು ಮತ್ತೆ ಪರಾಮರ್ಶಿಸಲಾಗಿದೆ ಅದರಲ್ಲೂ, ***ಹರಿಯಾಣ ರಾಜ್ಯ ಮತ್ತು ಇತರರು –ವಿರುದ್ಧ– ಭಜನಲಾಲ್ ಮತ್ತು ಇತರರು***[7] ಮೊಕದ್ದಮೆಯ ಸಂಬಂಧದಲ್ಲಿ ಘನ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪಿನಲ್ಲಿ ಅದು ಸರ್ಕಾರಿ ನೌಕರನ ಅಪ್ರಾಮಾಣಿಕತೆ ಮತ್ತು ಭ್ರಷ್ಟಾಚಾರದ ಕೃತ್ಯವನ್ನು ಸಾರ್ವಜನಿಕವಾಗಿ ಎಸಗಿರುವುದು ಕಂಡು ಬಂದರೆ ಮತ್ತು ಅವನ ವಿರುದ್ಧ ಎಫ್‌ಐಆರ್ ಅನ್ನು ಹೂಡಲಾಗಿದ್ದರೆ, ಹೊಣೆಗಾರಿಕಾ ಅಧಿಕಾರಿಯು, ದೂರಿನಲ್ಲಿ ಮಾಡಿದ ಆರೋಪಗಳ ಸಂಬಂಧದಲ್ಲಿ ಸೂಕ್ತವಾದ ಪ್ರಾಥಮಿಕ ತನಿಖೆಯನ್ನು ನಡೆಸುವುದು ಅವನ ಕರ್ತವ್ಯವಾಗಿರತಕ್ಕದ್ದು. ಸದರಿ ತೀರ್ಪಿನ 76ನೇ ಪ್ಯಾರಾನಲ್ಲಿ ಅದನ್ನು ಈ ಮುಂದಿನಂತೆ ನಿರ್ಣಯಿಸಿದೆ:–

> ‘‘ಯಾವುದೇ ಧನ ಸಂಪನ್ಮೂಲ ಅಥವಾ ಸ್ವತ್ತನ್ನು ಸ್ವಾಧೀನದಲ್ಲಿಟ್ಟುಕೊಂಡಿರುವುದೇ ಸ್ವತಃ ಒಂದು ಅಪರಾಧವೆಂದು ಪರಿಗಣಿಸಲು ಸಾಧ್ಯವಿಲ್ಲವೆಂಬ ಅಂಶವನ್ನು ಒತ್ತಿ ಹೇಳಿದೆ. ಅಲ್ಲದೆ ಅದು ಅಧಿನಿಯಮದ 5(1)(2) ಪ್ರಕರಣದ ವ್ಯಾಪ್ತಿಯೊಳಗೆ

7. 1992 ಎಸ್‌ಯುಪಿಪಿ (1)ಎಸ್‌ಸಿಸಿ 335

ಆಕ್ಷೇಪಾರ್ಹ ಸ್ವಾಧೀನತೆ ಮತ್ತು ಅಪರಾಧ ಮಾಡಿದ್ದಲ್ಲಿ ಅಂಥ ಧನ ಸಂಪನ್ಮೂಲಗಳ ಅಥವಾ ಸ್ವತ್ತುಗಳ ಸ್ವಾಧೀನತೆ ಸಲುವಾಗಿ ತದನುಸಾರವಾಗಿ ಮನದಟ್ಟು ಮಾಡಿಕೊಡಲು ವಿಫಲವಾಗಿರುತ್ತದೆ. ಆದುದರಿಂದ ಅಧಿನಿಯಮದ 5(1)(ಇ) ಪ್ರಕರಣದ ಅಡಿಯಲ್ಲಿ ಅಪರಾಧವನ್ನು ವಿಚಾರಣೆ ಮಾಡುವ ಯಾರೇ ಪೊಲೀಸ್ ಅಧಿಕಾರಿಯು ಅಂಥ ಅಪರಾದದೊಂದಿಗೆ ಆ ವ್ಯಕ್ತಿಯ ವಿರುದ್ಧ ದೋಷಪೂರಿತ ಪೂರ್ವ ನಿರ್ಧರಿತ ಕಲ್ಪನೆಗಳೊಂದಿಗೆ ಕ್ರಮ ಕೈಗೊಳ್ಳಬಾರದು ಮತ್ತು ಆ ವ್ಯಕ್ತಿಯು ಯಾವುದೇ ಕಿರುಕುಳ ಮತ್ತು ಬಾಧಕಕ್ಕೆ ಒಳಪಟ್ಟಿರುವುದನ್ನು ಮೊದಲು ಗಮನಕ್ಕೆ ತಂದುಕೊಳ್ಳಬೇಕಾಗುತ್ತದೆ. ಹಾಗೂ ವಿಚಾರಣೆಯ ಅವಧಿಯಲ್ಲಿ ಸಂಪತ್ತಿನ ಸಂಗ್ರಹವು ಅಕ್ರಮದ ಆರೋಪಗಳು ಆಧಾರರಹಿತ ಕಂಡು ಬಂದರೆ, ಅದು ವ್ಯಕ್ತಿಗೆ ಮಾಡಿದ ಹಾನಿ ಮಾತ್ರ ಅಲ್ಲದೇ ವ್ಯಕ್ತಿಯು ಹೊಂದಿರುವ ಪದಕ್ಕೆ ಮಾಡಿರುವ ಹಾನಿಯು ಅಗಣಿತವಾದುದಾಗಿದೆ ಮತ್ತು ಅಂದಾಜಿಗೆ ನಿಲುಕದ ಹಾನಿಯಾಗಿರುತ್ತದೆ'' ಎಂದು ನಿರ್ಣಯವನ್ನು ನೀಡಿದೆ.

25. ಈ ಮೊಕದ್ದಮೆಯ ಸಂದರ್ಭದಲ್ಲಿ, ಅಗತ್ಯವಾದ ಸುರಕ್ಷಿತ ಕ್ರಮಗಳನ್ನು ಅನುಸರಿಸುವ ಮುಂಚೆಯೇ ಸರ್ಕಾರಿ ನೌಕರನ ಅಪ್ರಮಾಣಿಕತೆಯನ್ನು ಸಾರ್ವಜನಿಕವಾಗಿ ಅದರಲ್ಲೂ ಗಂಭೀರವಾದ ಆ ಯಾವುದೇ ದುರ್ನಡತೆಯ ಬಗ್ಗೆ ಕ್ರಮ ಕೈಗೊಂಡಾಗ ***ಪಿ. ಸಿರಾಜುದ್ದೀನ್ –ವಿರುದ್ಧ– ಮದ್ರಾಸ್ ರಾಜ್ಯ***[8] ಮೊಕದ್ದಮೆಯ ನಿರ್ಣಯದಂತೆಯೇ ಮೇಲಿನ ನಿರ್ಣಯದಲ್ಲಿ ಖಚಿತವಾಗಿ ನಿರೂಪಿಸಿದ ಕಾನೂನಿನ ಸ್ಥಾನವನ್ನು ಸಂಪೂರ್ಣವಾಗಿ ಉಪೇಕ್ಷಿಸಿ ಸಮಾಪನಗೊಳಿಸಲಾಗಿದೆ. ಅರ್ಜಿದಾರರು ಅರ್ಜಿಯೊಂದಿಗೆ ಹಾಜರುಪಡಿಸಿದ ಕೆಲವು ನಿಷ್ಕಳಂಕ ದಸ್ತಾವೇಜು ಸಂಬಂಧದಲ್ಲಿ, ನನ್ನ ಅಭಿಪ್ರಾಯೋಕ್ತಿಯಲ್ಲಿ, ಪ್ರಸ್ತುತ ಮೊಕದ್ದಮೆಯ ಸನ್ನಿವೇಶ ಸಂಗತಿಯಲ್ಲಿ,

8. ಎಐಆರ್ 1971 ಎಸ್‌ಸಿ 520

ದೂರುದಾರರು ಮಾಡಿರುವ ಆರೋಪಗಳನ್ನು ಪ್ರಾಥಮಿಕ ವಿಚಾರಣೆ ಮಾಡುವುದು ಅನಿವಾರ್ಯವಾಗಿಲ್ಲದಿರುವುದು ಮಾತ್ರವಲ್ಲದೆ 2ನೇ ಸಂಖ್ಯೆಯ ಪ್ರತ್ಯರ್ಜಿದಾರ ನಡೆಸಿದ ಪ್ರಾಥಮಿಕ ವಿಚಾರಣೆಯಲ್ಲಿ 9ನೇ ಸಂಖ್ಯೆಯ ಆರೋಪಿಯ ಮೇಲಿನ ಸಾಕ್ಷ್ಯವು ಮೇಲ್ನೋಟದಲ್ಲಿ ದೋಷದಿಂದ ಕೂಡಿದೆ ಎಂಬುದು ಕಂಡು ಬಂದಿರುವುದು ಮೊಕದ್ದಮೆಯನ್ನು ನೋಂದಾಯಿಸಿಲು ಅವಲಂಬನೆಯಾಗಿ ತೆಗೆದುಕೊಳ್ಳುವುದಕ್ಕೆ ಮುಂಚಿತವಾಗಿಯೇ ಭಾಗಶಃ ವಿಫಲತೆಯು ಕಂಡುಬರುತ್ತದೆ. ಅರ್ಜಿದಾರರಲ್ಲಿ ಅದರಲ್ಲೂ 8ನೇ ಅರ್ಜಿದಾರ (ಆರೋಪಿ ಸಂಖ್ಯೆ 9) ಇವರಿಗೆ ಆಗಿರುವ ಹಾನಿಯೂ ಲೆಕ್ಕಕ್ಕೆ ನಿಲುಕುವುದಿಲ್ಲ ಇದು ನ್ಯಾಯದ ವಿಫಲತೆಯ ಪರಿಣಾಮವಾಗಿದೆ.

26. ಅರ್ಜಿದಾರರು ಹಾಜರು ಪಡಿಸಿದ ದಸ್ತಾವೇಜುಗಳನ್ನು ನಾನು ಸ್ವತಃ ಕೂಲಂಕುಷವಾಗಿ ಪರಾಮರ್ಶಿಸಿರುತ್ತೇನೆ. ಹಾಗೆ ಪರಾಮರ್ಶಿಸಿದ ದೂರಿನ ಪ್ರತಿಯಲ್ಲಿ 9ನೇ ಸಂಖ್ಯೆಯ ಆರೋಪಿಯ ವಿರುದ್ಧ ಆರೋಪಗಳನ್ನು ಮಾಡಿ ಅನಾಮಧೇಯ ದೂರನ್ನು ಲೋಕಾಯುಕ್ತ ಕಚೇರಿಯಲ್ಲಿ ಸ್ವೀಕರಿಸಲಾದ ದೂರಿನ ಪ್ರತಿಯೂ ಅದರಲ್ಲಿ ಒಂದಾಗಿದೆ, ಲೋಕಾಯುಕ್ತ ಕಚೇರಿಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಕಾರ್ಯ ನಿರ್ವಹಿಸುತ್ತಿರುವ ಕಾಲಾವಧಿಯಲ್ಲಿ ಅವರು ಪದೀಯ ಸ್ಥಾನವನ್ನು ದುರ್ಬಳಕೆ ಮಾಡಿಕೊಳ್ಳುವ ಮೂಲಕ ಕೋಟ್ಯಾಂತರ ರೂಪಾಯಿಗಳನ್ನು ಮತ್ತು ಭಾರೀ ಸ್ವತ್ತುಗಳನ್ನು ಸಂಪಾದಿಸಿರುವರು ಎಂಬ ದೂರು 9ನೇ ಆರೋಪಿಯ ವಿರುದ್ಧದ ಅನಾಮಧೇಯ ದೂರಾಗಿದೆ. ಈ ಅನಾಮಧೇಯ ದೂರಿನ ದಿನಾಂಕ 29.1.2009 ಸದರಿ ದೂರಿನಲ್ಲಿ 9ನೇ ಸಂಖ್ಯೆಯ ಆರೋಪಿಯ ಮೇಲೆ ನಿರ್ದಿಷ್ಟವಾಗಿ ಆರೋಪಿಯ ತಾಯಿ ಮತ್ತು ಇತರ ಸಂಬಂಧಿಕರ ಹೆಸರಿನಲ್ಲಿ ಭಾರೀ ಸ್ವತ್ತುಗಳನ್ನು ಸಂಪಾದಿಸಿರುವರು ಎಂಬುದು ನಿರ್ದಿಷ್ಟವಾದ ಆರೋಪವಾಗಿದೆ. ಈ ಮೊಕದ್ದಮೆಯಲ್ಲಿ 1ನೇ ಸಂಖ್ಯೆ ಪ್ರತ್ಯರ್ಜಿದಾರರು ಹೂಡಿದ ಖಾಸಗೀ ದೂರಿನಲ್ಲಿ ಉಲ್ಲೇಖಿಸಿದ 16 ಸರ್ವೇ ಸಂಖ್ಯೆ ವಿವಿಧ ಸ್ಥಳಗಳಲ್ಲಿ ಇರುವ ನಿವೇಶನ ಭೂಮಿಗಳನ್ನು ಬಹುತೇಕ ಗುರುತಿಸಲಾಗಿದೆ. ಶಿವಮೊಗ್ಗದ ಉಪ ಪೊಲೀಸ್ ಅಧೀಕ್ಷಕರು ಸದರಿ ಆರೋಪಗಳನ್ನು ವಿಚಾರಣೆ ಮಾಡಿ ದಿನಾಂಕ 29.1.2009ರಂದು ವಿವರವಾದ ವರದಿಯನ್ನು ಸಲ್ಲಿಸಿರುತ್ತಾರೆ. ವರದಿಯಲ್ಲಿ ಸದರಿ 16 ಸರ್ವೇ ನಂಬರ್‌ಗಳ ಆರ್.ಟಿ.ಸಿ ಗಳನ್ನು ಬಹಳ

ಜಾಗರೂಕತೆಯಿಂದ ಪರಿಶೀಲಿಸಿರುತ್ತಾರೆ ಮತ್ತು ಸದರಿ ಸ್ವತ್ತುಗಳಿಗೆ ಸಂಬಂಧಿಸಿದ ಪೂರ್ವಾದಿಗಳನ್ನು ಪರಿಶೀಲಿಸಿದಾಗ, ಅನಾಮಧೇಯ ದೂರಿನಲ್ಲಿ ನಮೂದಿಸಲಾದ ಸ್ವತ್ತುಗಳು 9ನೇ ಸಂಖ್ಯೆ ಆರೋಪಿಗಾಗಲೀ ಅಥವಾ ಅವರ ಕುಟುಂಬ ಸದಸ್ಯರು ಅಥವಾ ಸಂಬಂಧಿಕರುಗಳಿಗಾಗಲೀ ಸೇರಿದ್ದಲ್ಲ ಎಂಬುದು ವಿಚಾರಣಾ ವರದಿಯಲ್ಲಿ ನಿರೂಪಿಸಿರುತ್ತಾರೆ. ಈ ವರದಿಯಲ್ಲಿ, ತನಿಖಾಧಿಕಾರಿಯೂ ಎಂದರೆ ಉಪ ಪೊಲೀಸ್ ಅಧೀಕ್ಷಕರು 9ನೇ ಸಂಖ್ಯೆ ಆರೋಪಿಯ ವಿರುದ್ಧ ಮಾಡಲಾದ ಆರೋಪಗಳು ಅದರಲ್ಲೂ ಅಗ್ನಿ ದಿನಪತ್ರಿಕೆಯಲ್ಲಿ ಮಾಡಲಾದ ಆರೋಪಗಳು ದೋಷಪೂರಿತವಾಗಿದೆ. ಅಸಮಂಜಸವಾಗಿದೆ ಎಂದು ಸ್ಪಷ್ಟ ಪಡಿಸಿರುವರು.

27. ನಂತರದಲ್ಲಿ, 9ನೇ ಸಂಖ್ಯೆಯ ಆರೋಪಿಯ ವಿರುದ್ಧ ವಿಜಯ್ ಆರ್ ಎಂಬುವರು ಮತ್ತೊಂದು ಲಿಖಿತ ದೂರನ್ನು ನೀಡಿರುವರು. ಬೈಲಹೊಂಗಲದ ಉಪ–ಪೊಲೀಸ್ ಅಧೀಕ್ಷಕರು ಆ ದೂರನ್ನು ಯುಕ್ತವಾಗಿ ವಿಚಾರಣೆ ಮಾಡಿ ದಿನಾಂಕ 12.7.2013ರಂದು ವರದಿಯನ್ನು ನೀಡಿರುತ್ತಾರೆ. ವರದಿಯಲ್ಲಿ 9ನೇ ಸಂಖ್ಯೆಯ ಆರೋಪಿಯ ವಿರುದ್ಧ ಮಾಡಲಾದ ಆರೋಪಗಳೆಲ್ಲವು ಸುಳ್ಳೆಂದು ಮತ್ತು 9ನೇ ಸಂಖ್ಯೆಯ ಆರೋಪಿಯ ಸ್ವಾಧೀನದಲ್ಲಿರುವ ಸ್ವತ್ತುಗಳೆಲ್ಲವು ಅವನ ಆದಾಯದಿಂದಲೇ ಸಂಪಾದಿಸಿರುವುದು ಕಂಡು ಬರುತ್ತದೆ. ದೂರಿನಲ್ಲಿ ಹೇಳಲಾದ ಆರೋಪಗಳೆಲ್ಲವು ಸುಳ್ಳೆಂದು ವರದಿ ಮಾಡಿರುತ್ತಾರೆ. ದಿನಾಂಕ 12.7.2013ರಂದು ಸಲ್ಲಿಸಲಾದ ವರದಿಯಲ್ಲಿ ಈ ಸ್ವತ್ತುಗಳ ವಿಷಯಕ್ಕೊಳಪಟ್ಟಂತೆ ಸ್ವತ್ತುಗಳ ಹಾಲಿ ಪಿ.ಸಿ.ಆರ್ ಅನ್ನು ಸದರಿ ವಿಚಾರಣೆಗೆ ಒಳಪಡಿಸಿ ಆ ಸ್ವತ್ತುಗಳ ಸ್ಪಷ್ಟತೆಯನ್ನು ಬಹಿರಂಗಗೊಳಿಸಿದೆ ಮತ್ತು ಈ ವರದಿಯಲ್ಲಿ, ದೂರಿನಲ್ಲಿ ಆರೋಪಿಸಿದ ಸ್ವತ್ತುಗಳ 1ನೇ ಸಂಖ್ಯೆಯ ಆರೋಪಿಯ ತಾಯಿಯ ಹೆಸರಿನಲ್ಲಿರುವುದು ಕಂಡು ಬರುತ್ತದೆ ಹಾಗೂ ಈ ಸ್ವತ್ತುಗಳು ಅವರಿಗೆ ಪಿತ್ರಾರ್ಜಿತವಾಗಿ ಬಂದ ಸ್ವತ್ತಗಳಾಗಿವೆ ಮತ್ತು ಇತರ ಸ್ವತ್ತುಗಳು ಕವಿತ ಎಂಬ ಹೆಸರಿನಲ್ಲಿದ್ದು, ಅವರು ಸಿವಿಲ್ ನ್ಯಾಯಾಲಯ ಮೂ.ದಾ.ಸಂಖ್ಯೆ 178/2008ರ ಡಿಕ್ರಿಯ ಮೂಲಕ ಕವಿತಾ ಅವರಿಗೆ ಬಂದ ಪಾಲಾಗಿದೆ ಮತ್ತು ಅವರ ಹೆಸರಿನಲ್ಲಿರುವ ಹರಪನಹಳ್ಳಿಯಲ್ಲಿರುವ

ನಿವೇಶನವನ್ನು 1,63,000/- ರೂ.ಗಳನ್ನು ಸಂದಾಯ ಮಾಡಿ ತನ್ನ ತಂದೆಯಿಂದ ಅವರು ಖರೀದಿಸಿರುತ್ತಾರೆ ಎಂದು ವರದಿಯಲ್ಲಿ ವಿವರವಾಗಿ ನಮೂದಿಸಲಾಗಿದೆ.

28. ಹಾಗಾಗಿ, ಅರ್ಜಿದಾರರು ಹಾಜರು ಪಡಿಸಿದ ವಸ್ತು ವಿಷಯಗಳು ಮೇಲ್ನೋಟಕ್ಕೆ ಸರಿಯೆಂದು ಕಂಡು ಬಂದ ಕಾರಣದಿಂದ 1ನೇ ಸಂಖ್ಯೆ ಪ್ರತ್ಯರ್ಜಿದಾರರ ಪರವಾಗಿ ಸಾಧ್ಯವಾದಷ್ಟು ಬೇಗನೇ ಎಫ್‌ಐಆರ್‌ನ್ನು ದಾಖಲಿಸಿಕೊಳ್ಳಲಾಗಿದೆ. ಅತೀ ಸಣ್ಣ ಆರೋಪದ ಮೇಲೆ 1ನೇ ಸಂಖ್ಯೆಯ ಆಪಾದಿತನ ಮೇಲೆ ವಿಚಾರಣೆಯನ್ನು ನಡೆಸಲಾಗಿದೆ ಮತ್ತು ಸರ್ಕಾರಿ ನೌಕರನಾಗಿರುವ 9ನೇ ಸಂಖ್ಯೆ ಆಪಾದಿತನು ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ 13ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಈ ಯಾವುದೇ ಅಪರಾಧ ದುರ್ವ್ಯವಹಾರದ ಕೃತ್ಯಗಳು ಒಳಗೊಳ್ಳುವುದಿಲ್ಲ ಎಂಬುದು ವಿಚಾರಣೆಯಿಂದ ತಿಳಿದು ಬರುತ್ತದೆ.

29. ಅರ್ಜಿದಾರರು ವಸ್ತುವಿಷಯಕ್ಕೆ ಸಂಬಂಧಿಸಿದ ಎತ್ತಲಾದ ಪ್ರಶ್ನೆಗೆ ಅವಲಂಬಿತವಾಗಿ ಅಪರಾಧ ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಅಡಿಯಲ್ಲಿ ವ್ಯವಹರಣೆ ಮಾಡಬೇಕೆಂದು ಭಾರತದ ಘನ ಸರ್ವೋಚ್ಚ ನ್ಯಾಯಾಲಯ ***ರಾಜೀವ್ ಥಾಪರ್ ಮತ್ತು ಇತರರು -ವಿರುದ್ಧ- ಮದನ್‌ಲಾಲಾ ಕಪೂರ್***[9] ಮೊಕದ್ದಮೆಯಲ್ಲಿ ನೀಡಿದ ತೀರ್ಪಿನ ಅಂಶವನ್ನು ಅವಲಂಬನೆಯಾಗಿ ತೆಗೆದುಕೊಳ್ಳಬೇಕೆಂದು ವಿನಂತಿಸಿರುವರು. ಸದರಿ ತೀರ್ಪಿನ 29ನೇ ಪ್ಯಾರಾದಲ್ಲಿ ಘನ ಸರ್ವೋಚ್ಚ ನ್ಯಾಯಾಲಯದ ನಿರ್ಣಯವು ಈ ಕೆಳಗಿನಂತಿದೆ:

> *29. ಅಪರಾಧ ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಅಡಿಯಲ್ಲಿ ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಸಂಬಂಧದಲ್ಲಿ ಇರುವ ವಿವಾದವನ್ನು ಪರಿಶೀಲಿಸಲಾಗಿದ್ದು, ಅದರಲ್ಲಿ ವಿವಾದವು ವಿಚಾರಣೆಯ ಹಂತದಲ್ಲಿರುವಾಗ ಅಥವಾ*

9. (2013) 3 ಎಸ್‌ಸಿಸಿ 330

*ಇತ್ಯರ್ಥದಲ್ಲಿರುವ ಹಂತದಲ್ಲಿರುವಾಗ, ಅಥವಾ ಆಪಾದನೆಗಳನ್ನು ನಿರೂಪಿಸುವ ಹಂತದಲ್ಲಿರುವ ಆಪಾದಿತನ ವಿರುದ್ಧ ಪ್ರಾರಂಭಿಸಲಾದ ಪ್ರಾಸಿಕ್ಯೂಷನ್ ಅನ್ನು ವಜಾ ಮಾಡುವ ಆಯ್ಕೆಯನ್ನೂ ಉಚ್ಚ ನ್ಯಾಯಾಲಯುವು ಅಧಿಕಾರ ವ್ಯಾಪ್ತಿಯನ್ನು ಹೊಂದಿದೆಯೇ ಎಂಬುದನ್ನು ಪರಾಮರ್ಶಿಸಲಾಗಿದೆ. ಈ ಎಲ್ಲಾ ಹಂತಗಳ ಮುಂಚೆಯೇ ವಾಸ್ತವವಾಗಿ ಅಧಿವಿಚಾರಣೆಯು ಪ್ರಾರಂಭವಾಗಿರುವ ಸಂದರ್ಭದಲ್ಲಿ ಆದಷ್ಟು ನಂತರ ಹಂತದಲ್ಲಿ ಅದೇ ಪ್ರಮಾಣಕಗಳು ಸ್ವಾಭಾವಿಕವಾಗಿ ಲಭ್ಯವಾಗುತ್ತವೆ. ಅಪರಾಧ ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಅಡಿಯಲ್ಲಿ ಅಧಿಕಾರವನ್ನು ಉಚ್ಚ ನ್ಯಾಯಾಲಯದಲ್ಲಿ ನಿಹಿತಗೊಳಿಸಲಾಗಿದೆ. ಮೇಲೆ ಉಲ್ಲೇಖಿಸಿದ ಹಂತದಲ್ಲಿ ಪ್ರಾಸಿಕ್ಯೂಷನ್ 1 ದೂರುದಾರ ಮಂಡಿಸಿದ ಸಾಕ್ಷ್ಯವನ್ನು ಪುರಸ್ಕರಿಸಿದ ಹೊರತು ಪ್ರಾಸಿಕ್ಯೂಷನ್ / ದೂರುದಾರ ಸಂದರ್ಭದಲ್ಲಿ ಅದು ನಕಾರಾತ್ಮಕವಾಗಿದ್ದು, ಸಾಧ್ಯವಾದಷ್ಟು ದೂರಗಾಮಿ ತತ್ಪರಿಣಾಮಕಾರಿಯಾಗಿರುವಾಗ ಬಹಳ ಜಾಗರೂಕತೆ, ಎಚ್ಚರಿಕೆ ಮತ್ತು ಸೂಕ್ಷ್ಮ ವಿವೇಚನೆಯೊಂದಿಗೆ ಅಂಥ ನಿರ್ಣಯಗಳನ್ನು ಮಾಡಬೇಕಾಗುತ್ತದೆ. ಅಪರಾಧ ದಂಡ ಪ್ರಕ್ರಿಯಾ ಸಂಹಿತೆಯ 482ನೇ ಅಡಿಯಲ್ಲಿ ಅಂತರ್ಗತವಾಗಿರುವ ಉಚ್ಚ ನ್ಯಾಯಾಲಯದಲ್ಲಿ ಅಧಿಕಾರ ವ್ಯಾಪ್ತಿಯನ್ನು ಪ್ರಾರ್ಥಿಸಿದಾಗ, ಉಚ್ಚನ್ಯಾಯಾಲಯ ನ್ಯಾಯಸಮ್ಮತೆ, ಯುಕ್ತವಾದ ಮತ್ತು ನಿಸ್ಸಂಶಯ ಅಂಶಗಳ ಆಧಾರದ ಮೇಲೆ ಅವನ/ಅವರ ಪ್ರತಿವಾದಿಗಳು ನಿರ್ಣಯಕ್ಕೆ ಬಂದಿರುವಾಗ, ಆಪಾದಿತನು ಹಾಜರುಪಡಿಸಿದ ವಸ್ತು ವಿಷಯದ ಬಗೆಗೆ ಅದಕ್ಕೆ ಸಂಪೂರ್ಣವಾಗಿ ತೃಪ್ತಿಕರವೆನಿಸಿದರೆ; ಹಾಜರುಪಡಿಸಿದ ವಸ್ತು ವಿಷಯವು ಆಪಾದಿತರ ವಿರುದ್ಧ ಸಮರ್ಥಿಸುವ ಆರೋಪಗಳಲ್ಲಿ ಒತ್ತು ನೀಡಲಾದ ಅಂಶಗಳಿಗೆ ಅನರ್ಹವಾಗಿರುವುದು ಮತ್ತು ಚ್ಯುತಿ ಉಂಟು ಮಾಡಿದ ರೀತಿಯಲ್ಲಿರುವುದು: ಮತ್ತು ಪ್ರಾಸಿಕ್ಯೂಷನ್/ ದೂರುದಾರರು ಸಮರ್ಥಿಸುವ ಆಪಾದನೆಯಲ್ಲಿ ಒಳಗೊಂಡ*

*ಆರೋಪಗಳ ಸತ್ಯತೆಯನ್ನು ಅಂಥ ವಸ್ತು ವಿಷಯವು ಸ್ಪಷ್ಟವಾಗಿ ನಿರಾಕರಿಸಿರುವುದು ತಿರಸ್ಕರಿಸುತ್ತದೆ. ಅದು ಯಾವುದೇ ಸಾಕ್ಷ್ಯವನ್ನು ಅವಶ್ಯವಾಗಿ ದಾಖಲಿಸಿದ ಹೊರತು ಪ್ರಾಸಿಕ್ಯೂಷನ್/ದೂರುದಾರರು ಸಮರ್ಥಿಸಿದ ಆಪಾದನೆಗಳನ್ನು ನಿರಾಕರಿಸುವುದು, ತಿರಸ್ಕರಿಸುವುದು ಮತ್ತು ವಜಾಗೊಳಿಸುವುದು ಯುಕ್ತವಾಗಿರತಕ್ಕದ್ದು. ಅವಲಂಬಿಸಿ ಅದನ್ನು ಖಂಡಿಸದಿರುವಾಗ ಅಥವಾ ಪರ್ಯಾಯವಾಗಿ ಸಮರ್ಥವಾಗಿ ಖಂಡಿಸದಿರುವಾಗ ಈ ವಸ್ತು ವಿಷಯವು ಶುದ್ಧ ಚಾರಿತ್ರ್ಯ ಮತ್ತು ದೋಷ ರಹಿತ ಗುಣಮಟ್ಟದಿಂದ ಕೂಡಿರುತ್ತದೆ. ಆಪಾದಿತನು ಅವಲಂಬಿಸಿರುವ ವಸ್ತು ವಿಷಯವನ್ನು ಸುಳ್ಳಾದ ಆಪಾದನೆಗಳ ಆಧಾರದ ಮೇಲೆ ವಾಸ್ತವವಾಗಿ ವಜಾಗೊಳಿಸುವುದು ಮತ್ತು ನಿಷ್ಪ್ರಯೋಜಕಗೊಳಿಸುವುದಕ್ಕೆ ಅಂಥ ಒಬ್ಬ ಯುಕ್ತ ವ್ಯಕ್ತಿಯನ್ನು ಮನಗಾಣಿಸುವಂತಿರತಕ್ಕದ್ದು. ಅಂಥ ಸನ್ನಿವೇಶಗಳಲ್ಲಿ, ಅಂಥ ಅಪರಾಧಿ ವ್ಯವಹರಣೆಗಳನ್ನು ವಜಾಗೊಳಿಸುವುದಕ್ಕೆ ಅಪರಾಧ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಅಡಿಯಲ್ಲಿ ನ್ಯಾಯಾಲಯದ ವ್ಯವಹರಣೆಯನ್ನು ದುರುಪಯೋಗ ಪಡಿಸಿಕೊಳ್ಳುವುದನ್ನು ತಡೆಯುವುದಕ್ಕಾಗಿ ಉಚ್ಚ ನ್ಯಾಯಾಲಯ ತನ್ನ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುವುದು ಅದರ ನ್ಯಾಯಿಕ ಆತ್ಮಸಾಕ್ಷಿಯಾಗಿದೆ ಮತ್ತು ನ್ಯಾಯೋದ್ದೇಶವನ್ನು ರಕ್ಷಿಸುವುದು ಅದರ ಕರ್ತವ್ಯವಾಗಿದೆ.*

*(ಒತ್ತು ನೀಡಲಾಗಿದೆ)*

30. ಪ್ರತ್ಯರ್ಜಿದಾರನು ತನ್ನ ಆಕ್ಷೇಪಣಾ ಹೇಳಿಕೆಯಲ್ಲಿ 9ನೇ ಸಂಖ್ಯೆಯ ಆಪಾದಿತನು ಈ ಮುಂಚೆ ಲೋಕಾಯುಕ್ತ ಕಚೇರಿಯಿಂದ ಪೊಲೀಸು ಇನ್ಸ್‌ಪೆಕ್ಟರ್ ಆಗಿ ಕೆಲಸ ನಿರ್ವಹಿಸುತ್ತಿದ್ದ ವ್ಯಕ್ತಿಯಾಗಿದ್ದು, ಈ ಕಾರಣದಿಂದ ತನ್ನ ಪ್ರಭಾವವನ್ನು ಬಳಸಿ ಈ ಆಪಾದನೆಗಳಿಂದ ಅವನು ತಪ್ಪಿಸಿಕೊಂಡಿರುವ ಸಾಧ್ಯತೆಯ ಅಂಶವನ್ನು ಒತ್ತಿ ಹೇಳಿರುತ್ತಾನೆ. ಸದರಿ ವಾದಾಂಶವು ಹಾಗೆ ಆಗಿರಲು ಸಾಧ್ಯವಿಲ್ಲ ಎಂಬುದು

ಅರ್ಜಿದಾರನು ಹಾಜರುಪಡಿಸಿದ ತನಿಖಾ ವರದಿಗಳನ್ನು ತಿರಸ್ಕರಿಸಲು ಸಾಧ್ಯವಿಲ್ಲ. ಈ ತನಿಖಾ ವರದಿಗಳಲ್ಲಿ ತನಿಖಾಧಿಕಾರಿಯು ನಡೆಸಿದ ತನಿಖಾ ವ್ಯವಹರಣೆಗಳ ಉಲ್ಲೇಖಗಳಲ್ಲಿ ತನಿಖಾಧಿಕಾರಿಯೂ ನಿರ್ದಿಷ್ಟವಾಗಿ ತನಿಖಾ ಪದ್ಧತಿ ಆರ್‌ಟಿಸಿಗಳ ಸತ್ಯಾಪನೆ, ಕಂದಾಯ ದಾಖಲೆಗಳನ್ನು, ಸಂಬಂಧಿಸಿದ ಶುದ್ಧ ಕ್ರಯ ಪತ್ರಗಳನ್ನು, ಪೂರ್ವಾಧಿಗಳನ್ನು ಮತ್ತು ಸಾಕ್ಷ್ಯದಾರರ ಹೇಳಿಕೆಗಳನ್ನು ಈ ವರದಿಯಲ್ಲಿ ನಿರೂಪಿಸಿರುತ್ತಾರೆ. ತನಿಖಾ ವರದಿಯಲ್ಲಿ ಸ್ವತ್ತಿನ ಪ್ರತಿಯೊಂದು ಬಾಬಿನ ಮೇಲೆ ಮಾಡಿದ ಚರ್ಚೆಯ ಅಂಶವನ್ನು ಒಳಗೊಂಡಿದೆ. ಖಾಸಗೀ ದೂರಿನ ಹಿನ್ನೆಲೆಯಲ್ಲಿ ಯಾವುದೇ ಸ್ವತ್ತಿನ ನೋಂದಾಯಿತ ಪತ್ರಗಳು ಅಥವಾ ಕಂದಾಯ ದಾಖಲೆಗಳ ಉಲ್ಲೇಖಗಳನ್ನು ಹೊರತುಪಡಿಸಿದ ಹಲವು ಆರೋಪಗಳು ಮಾಡಿ ದೂರನ್ನು ಹೂಡಲಾಗಿದೆ. ಸದರಿ ಸನ್ನಿವೇಶಗಳ ಅಡಿಯಲ್ಲಿ ಮಾನ್ಯ ವಿಶೇಷ ನ್ಯಾಯಾಧೀಶರು ಅಪರಾಧ ದಂಡ ಪ್ರಕ್ರಿಯಾ ಸಂಹಿತೆಯ 156(3)ನೇ ಪ್ರಕರಣದ ಅಡಿಯಲ್ಲಿ ಎಫ್‌ಐಆರ್ ಅನ್ನು ದಾಖಲಿಸಿದ ಪರಿಣಾಮವಾಗಿ ಮತ್ತು ಸಂಪೂರ್ಣ ಅಕ್ರಮವಾದ ಮತ್ತು ಸಮರ್ಥಿತವಾಗಿರದ ಮೇಲೆ ತನಿಖೆ ನಡೆಸಲು ನಿರ್ದೇಶಿಸಿರುತ್ತಾರೆ. ಮಾನ್ಯ ಮ್ಯಾಜಿಸ್ಟ್ರೇಟರು ಅಪರಾಧ ದಂಡ ಪ್ರಕ್ರಿಯಾ ಸಂಹಿತೆಯ 156(3)ನೇ ಪ್ರಕರಣದ ಅಡಿಯಲ್ಲಿ ತನಿಖೆಯನ್ನು ನಡೆಸಲು ನಿರ್ದೇಶಿಸುವ ಮುಂಚೆ ಎಫ್‌ಐಆರ್‌ನಲ್ಲಿ ಒಳಗೊಂಡಿರುವ ವಿವಿಧ ಆಪಾದನೆಗಳ ಸಂಬಂಧದಲ್ಲಿ ಸಮರ್ಥವಾದ ಗಮನವನ್ನು ನೀಡುವುದಕ್ಕೆ ವಿಫಲರಾಗಿರುವರು. ಎರಡನೇ ಪ್ರತ್ಯರ್ಜಿದಾರರು ಸಹ ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ 8 ಮತ್ತು 9ನೇ ಪ್ರಕರಣದ ಅಡಿಯಲ್ಲಿ ದೂರಿನಲ್ಲಿ ಹೇಳಲಾದ ಯಾವುವೇ ಅಪರಾಧ ಒಳಗೊಳ್ಳುತ್ತದೆ ಎಂಬುದೇ ಸಮರ್ಥವಾದ ಅಂಶವನ್ನು ನೀಡಲು ವಿಫಲರಾಗಿರುವರು. ಎರಡನೇ ಪ್ರತ್ಯರ್ಜಿದಾರರು ಭಾರತ ದಂಡ ಸಂಹಿತೆಯ 34, 143, 504, 506 ಮತ್ತು 198ನೇ ಪ್ರಕರಣದ ಅಡಿಯಲ್ಲಿನ ಅಪರಾಧಕ್ಕಾಗಿ ಮೊಕದ್ದಮೆಯನ್ನು ದಾಖಲಿಸುವುದಕ್ಕೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದಿಲ್ಲ. ಎರಡನೇ ಪ್ರತ್ಯರ್ಜಿದಾರರು ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ 13(1)(ಇ) ಪ್ರಕರಣದ ಅಡಿಯಲ್ಲಿ ಅದನ್ನು ಅನ್ವಯಿಸುವ ಮುಂಚೆ ಆಪಾದಿತ ಸ್ವಾಧೀನ ಸ್ವತ್ತುಗಳ ಆರೋಪಗಳೊಳಗೆ ಯಾವುದೇ ಪ್ರಾರಂಭಿಕ ತನಿಖೆಯನ್ನು ನಡೆಸುವುದಕ್ಕೆ ವಿಫಲರಾಗಿರುವರು. ಪ್ರತ್ಯರ್ಜಿದಾರರು ಹೂಡಿರುವ ಇಡೀ ಅಪರಾಧ

ವ್ಯವಹರಣೆಗಳು ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ ಉಪಬಂಧಗಳಿಗೆ ಪ್ರತಿಕೂಲವಾಗಿದೆ, ಅದರಂತೆಯೇ, ಮೇಲೆ ಉಲ್ಲೇಖಿಸಿದ ನಿರ್ಣಯಗಳಲ್ಲಿ ಮಂಡಿತವಾದ ಇತ್ಯರ್ಥ ತತ್ವಗಳಿಗೂ ಇದು ಪ್ರತಿಕೂಲವಾಗಿದೆ. ಸದರಿ ಸನ್ನಿವೇಶಗಳ ಅಡಿಯಲ್ಲಿ, ಮೇಲಿನ ನಿರಂತರ ವ್ಯವಹರಣೆಗಳು ಅರ್ಜಿದಾರರನ್ನು ಅನವಶ್ಯಕ ಕಿರುಕುಳಕ್ಕೆ ಈಡು ಮಾಡಿರುವುದು ಅಲ್ಲದೆ ಅವರ ಕಾನೂನು ಹಕ್ಕುಗಳನ್ನು ಅತಿಲ್ಲಂಘಿಸಿದೆ ಅಲ್ಲದೆ, ಅದು ನ್ಯಾಯಾಲಯದ ವ್ಯವಹರಣೆಯನ್ನು ದುರುಪಯೋಗಪಡಿಸಿಕೊಂಡಿದೆ. ಈ ಎಲ್ಲ ಕಾರಣಗಳಿಂದ ನಾನು ಈ ಪ್ರಶ್ನಿತ ವ್ಯವಹರಣೆಗಳು ಮುಂದುವರೆಯಲು ಪುರಸ್ಕರಿಸುವುದಿಲ್ಲ.

ತದನುಸಾರವಾಗಿ, ಅಪರಾಧ ಅರ್ಜಿಯನ್ನು **ಪುರಸ್ಕರಿಸಲಾಗಿದೆ**. ದಿನಾಂಕ 2.12.2013ರ ದೂರನ್ನು ಮತ್ತು ಇದರ ಪರಿಣಾಮ ನೋಂದಾಯಿತವಾದ ಎಫ್ಐಆರ್ ಅರ್ಜಿ ಸಂಖ್ಯೆ 107/2013ನ್ನು ಮತ್ತು ಮುಂದುವರೆದ ವಿಚಾರಣೆಯನ್ನು ಈ ಮೂಲಕ ವಜಾ ಮಾಡಿದೆ.